ಉಪನ್ಯಾಸ ಗ್ರಂಥಮಾಲೆ

೩೩೮

ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ

ಎಂ. ಬಿ. ಹೂಗಾರ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಎಪ್ರಿಲ್ ೧೯೭೩

ಉಪನ್ಯಾಸ ಗ್ರಂಥಮಾಲೆ

೩೩೮

ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ

ಎಂ. ಬಿ. ಹೂಗಾರ



ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೮೩

ಪ್ರಕಾಶಕರು :

ಸಿ. ಎಸ್. ಕಣವಿ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಮಾರ್ಚ, ೧೯೮೩

ಬೆಲೆ : ೫೦ ಪೈಸೆ

ಮುದ್ರಕರು :

ಅಶೋಕ ಎಲ್. ಆಕಳವಾಡಿ
ವಾಸವಿ ಪ್ರಿಂಟರ್ಸ,
ಬ್ಯಾಂಕ ರೋಡ, ಧಾರವಾಡ-೫೮೦ ೦೦೧.

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರಿಗೆ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ

ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನ ಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೩೭ ಪುಸ್ತಕಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕ ಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು. ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತ ಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿ ಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿ. ಎಂ. ನಂಜುಂಡಪ್ಪ
ಕುಲಪತಿಗಳು

ನಿವೇದನೆ

'ಸೊಲ್ಲಾಪೂರ' ಜಿಲ್ಲೆಯ 'ಬಂಡಾರಕವತೆ' ಎಂಬ ಗ್ರಾಮದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ "ಪ್ರಸಾರಾಂಗ" ದವರು ಏರ್ಪಡಿಸಿದ್ದ ಉಪನ್ಯಾಸ ಶಿಬಿರದಲ್ಲಿ ಮಾತನಾಡುವ ಅವಕಾಶ ನನಗೆ ದೊರಕಿತ್ತು. "ಜನಪದ ತ್ರಿಪದಿಗಳಲ್ಲಿ ಜೀವನಮೌಲ್ಯ" ಎಂಬ ವಿಷಯದನ್ನೇ ಮಾತನಾಡಿದ್ದೆ. ಈ 'ಪುಸ್ತಿಕೆಯು' ಆಭಾಷಣದ ವಿಸ್ತೃತ ರೂಪ.

ಜನಪದ ಸಾಹಿತ್ಯ ಒಂದು ದೊಡ್ಡ ಸಂಪತ್ತು. ಸರ್ವರೊಳಗೊಂದೊಂದು ನುಡಿ ಪಡೆದು ಜ್ಞಾನದ ನಿಧಿಯಾಗಿದೆ. ಸೂರ್ಯೋದಯದಿಂದ ಪ್ರಾರಂಭವಾಗಿ ಸೂರ್ಯಾಸ್ತದ ವರೆಗಿನ ರೈತನ ಪ್ರತಿಯೊಂದು ಕಾರ್ಯ ಚಟುವಟಿಕೆಗಳಲ್ಲಿ ಈ ಸಾಹಿತ್ಯದ ಹೊನಲು ಹಣಕಿಹಾಕುತ್ತದೆ. 'ನಾಲಗೆ ಹೇಳವರ್' 'ಬೆಳ್ಳಕ್ಕರಿಗಳ್' ಎಂದವರೂ ಸಹ ಬೆರಳು ಕಚ್ಚುವಂತಹ ಸಾಹಿತ್ಯ ನಮ್ಮ ಜನಸಾಮಾನ್ಯರಿಂದ ನಿರ್ಮಿಸಲ್ಪಟ್ಟದೆ. ಹೆಣ್ಣು-ಗಂಡು, ಬಾಲಕ,ಯುವಕ,ವೃದ್ಧ ಇವರೆಲ್ಲರೂ ಈ ಸಾಹಿತ್ಯದ ಸವಿ ಉಂಡವರೇ. ಕಿರಿದರಲ್ಲಿ ಪಿರಿದರ್ಥದ ಚಳಕ ಇಲ್ಲಿದೆ. ಬದುಕಿನ ಸಮಸ್ಯೆಗಳಿಗೆ ಇಲ್ಲಿ ಉತ್ತರಗಳು ಸಿಗುತ್ತವೆ. ನೊಂದ ಹೃದಯಕ್ಕೆ ಸಾಂತ್ವನದ, ಮಮತೆಯ ಮಾತ್ರ ಹೃದಯದ ಇನಿಜೇನು ಇಲ್ಲಿದೆ. ಇಲ್ಲಿ ಕೆಲಸ ಮಾಡುವ ಹತ್ತಾರು ಕೈಗಳಿಗೆ ಸಾಕಷ್ಟು ಕೆಲಸವಿದೆ. ಜನಪದ

ಗೀತಗಳಲ್ಲಿ, ತ್ರಿಪದಿಗಳಲ್ಲಿ ತೋರುವ ಜೀವನ ಮೌಲ್ಯಗಳ ಬಗ್ಗೆ ನಾನು ಇಲ್ಲಿ ವಿವರಿಸಿದ್ದು 'ಕರಿಯ ಕನ್ನಡಿಯಲ್ಲಿ' ಹಿಡಿದ ಪ್ರಯತ್ನ. ಈ ಪ್ರಯತ್ನದಲ್ಲಿ ನಾನು ಪೂರ್ಣ ಯಶ ಗಳಿಸಿದ್ದೇನೆಂದೇನಲ್ಲ. ಇಂತಹ ಪ್ರಯತ್ನಗಳು ಜನಪದ ಸಾಹಿತ್ಯದಲ್ಲಿ ಇನ್ನೂ ನಡೆದಷ್ಟು ಕ್ಷೇಮ. ಓದುಗರ ಪ್ರೀತಿಗೆ ಈ ಪುಸ್ತಿಕೆ ಪಾತ್ರವಾದರೆ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ನನ್ನನ್ನು ಉಪನ್ಯಾಸಕ್ಕೆ ಆಮಂತ್ರಿಸಿ, ಈಗ ಇದನ್ನು ಪ್ರಕಟಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಅವರನ್ನೂ, ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರನ್ನೂ ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಂ. ಗುಡ್ಡೀನ ಅವರನ್ನೂ, ಹಸ್ತಪ್ರತಿಯನ್ನು ಪರಿಶೀಲಿಸಿದ ತಜ್ಞರನ್ನೂ, ನನಗೆ ಪ್ರೋತ್ಸಾಹ ಕೊಟ್ಟ ಗುರುಗಳಾದ ಡಾ. ಸಂಗಮೇಶ ಬಿರಾದಾರ ಅವರನ್ನೂ ಕೃತಜ್ಞತೆಯಿಂದ ನೆನೆಯುತ್ತೇನೆ. ಅಂದು ಉಪನ್ಯಾಸ ಕೇಳಿ ಆನಂದಿಸಿದ 'ಬಂಡಾರ ಕವಠೆ' ಗ್ರಾಮದ ಮಹಾಜನರನ್ನು ನೆನೆಯದಿರಲಾರೆ.

ಶಿವಾನಂದ ಮಹಾವಿದ್ಯಾಲಯ
ಕಾಗವಾಡ(ಜಿ. ಬೆಳಗಾಂವ)

ಎಂ. ಬಿ. ಹೂಗಾರ

ಪರಿವಿಡಿ

೧. ಪೀಠಿಕೆ

ಜನಪದ ಸಾಹಿತ್ಯವು ಜನಸಾಮಾನ್ಯರಿಂದ ಹೊರಬಂದ ...ತ ರಂಗದ ಅಮೂಲ್ಯ ರತ್ನ. ಮಣ್ಣಿನ ಮಕ್ಕಳು ನೆಲದ ...ಣ ತೀರಿಸಲೆಂದು, ಆದ ಸಂತೊಷ ಬಚ್ಚಿಡಲಾರದೆ ತಮ್ಮ ...ರ್ನೊಳಗೆ ಬಿಚ್ಚಿಟ್ಟಿದ್ದಾರೆ. ತಮ್ಮ ಸುಖ-ದುಃಖ ನೋವು-...ಲಿವು, ಹಿಗ್ಗು-ಹಿರಿಮೆ, ಸೊಗಸು ಚಲುವಿಕೆಯನ್ನು ಈ ...ಪದಿಗಳಲ್ಲಿ ಜನಪದ ಕವಿಗಳು ತುಂಬಿದ್ದಾರೆ. ಇವುಗಳನ್ನು ...ಡಿದವರಿಗೆ ಮನಾನಂದ, ಕೇಳಿದವರಿಗೆ ರಸಾನಂದ. ಇಂತಹ ...ಹಿತ್ಯದ ಬಗ್ಗೆ ; ಇದರ ಹುಟ್ಟು ಬೆಳವಣಿಗೆಯ ಬಗ್ಗೆ ...ಕ್ಷ್ಮ ವಾಗಿಲ್ಲದಿದ್ದರೂ, ಸ್ಥೂಲವಾಗಿ ; ವಿವರವಾಗಿಯ ...ದ್ದರೂ, ಸಂಕ್ಷೇಪವಾಗಿ ; ನೋಡುವದು ಅವಶ್ಯವೆನಿಸುತ್ತದೆ

ಜನಪದ ಸಾಹಿತ್ಯ ಮತ್ತು ಜಾನಪದ ಸಾಹಿತ್ಯವೆಂಬ ...ಡು ಪದಗಳು ವಿದ್ವಾಂಸರಲ್ಲಿ ಸಾಕಷ್ಟು ಗೊಂದಲ ...ಪ್ಪಿಸಿವೆ. ಜನಪದ ಸಾಹಿತ್ಯವೆಂದು ಕೆಲವರು ಕರೆದರೆ ...ತ್ತೊಬ್ಬರು ಜಾನಪದ ಸಾಹಿತ್ಯವೆಂದು ಕರೆದು ಆದೇ ...ಕ್ತವೆಂದು ಹೇಳುತ್ತಾರೆ. ಜನರಿಂದ ನಿರಾಯಾಸವಾಗಿ, ...ರ್ಗಳವಾಗಿ ಹೃದಯದಿಂದ ಹೊರಬಂದು ನಾಲಗೆಯ ...ಲೆ ನೃತ್ಯಮಾಡುವ ಸಾಹಿತ್ಯದ ಹೊನಲೇ ಈ ಜಾನಪದ ...ಹಿತ್ಯ ಇನ್ನು ಜಾನಪದ ಸಾಹಿತ್ಯದ ಹುಟ್ಟು ಬೆಳವಣಿಗೆ ...ನ್ನು ಕುರಿತು ನೋಡೋಣ.

ಜೀವಿಗಳಲ್ಲಿ ಒಂದು ಬಗೆಯ ನಾದ ಇದೆ. ಅದಕ್ಕೆ ಮರುಳಾಗುವ ಸ್ವಭಾವವೂ ಇದೆ. ಪುಂಗಿ ನಾದಕ್ಕೆ ಸಪ ತಲೆಯಾಡಿಸಿದರೆ, ಮರಕ್ಕೆ ಕಟ ಕಟ ಸದ್ದುಮಾಡಿದ ಬಡಿಗನ ಹಕ್ಕಿ ಬರುತ್ತದೆ. ಅಳುವ ಮಗುವನ್ನು ಸಂತೈಸು ತಾಯಿಯಾದರೂ ಒಂದು ಬಗೆಯ ನಾದವನ್ನು ತೆಗೆದು ; ಮಗುವಿನ ಹೊಟ್ಟೆಗೆ ಹಾಲು ಹಾಕುವದರ ಜೊತೆಗೆ ಅದ ಕಿವಿಗಳಿಗೆ ಶಬ್ದರಸವನ್ನು ಸುರಿಸುತ್ತಾಳೆ. ಆ ಧ್ವನಿಯಿಂದ ಆ ನಾದದಿಂದ ಮಗು ಆಡುತ್ತದೆ.

ಭಾಷೆ ಬಾರದಿದ್ದಾಗ (ಗೊತ್ತಿರದಿದ್ದಾಗ) ಆ ಮಾನವನು ತನಗೆ ಸಂತೋಷವಾದಾಗ ಜಿಗಿದಾ ಕುಣಿದಾಡಿ, ಚೀರಾಡಿ, ಒದರಾಡಿರಬೇಕು. ದುಃಖವಾದಾ ಮುಖ ಸಣ್ಣದುಮಾಡಿಕೊಂಡು ಬೊರಾಡಿ ಅತ್ತು ಮು ಯಾಗಿ, ಬಿದ್ದುಕೊಂಡಿರಬೇಕು. ಭಾಷೆಯನ್ನವ ಜೊ ಹೊತ್ತಿರದಿದ್ದರೆ- 'ಅಸಂಸಾರಂನದೀಪ್ಯತೆ' ಎನ್ನುವ ದಂಡಿ ಮಾತು ಸತ್ಯವೆನಿಸುತ್ತದೆ. ಭಾಷೆತಿಳಿಯುವ ಮೊದ ಧ್ವನಿಯೇ ಅವನ ಕಾವ್ಯ. ಅದೇ ಅವನ ಸಂಗೀತ-ಸಾಹಿ ವಾಗಿರಬೇಕು. ಆದಿಮಾನವ ತನ್ನ ಭಾವನೆಗಳನ್ನು ಹೇ ಮೊಟ್ಟಮೊದಲು ಬಳಸಿಕೊಂಡ ನಾದ ರೂಪದ ಗೀತೆಗ ಜನಪದ ಸಾಹಿತ್ಯದ ಮೂಲರೂಪವೆನ್ನಬಹುದು. ಅರ್ಥಕ್ಕಿ ಮೊದಲು ನಾದವೇ ಪ್ರಧಾನವಾಗಿದ್ದಂತೆ ತೋರುತ್ತ

ಎಂದು ಡಾ. ಎಚ್. ತಿಪ್ಪೇರುದ್ರ ಸ್ವಾಮಿಯ

* ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪುಟ. ೯೨೪.

ಟ್ಟುತ್ತಾರೆ. ಈ ಕೆಳಗಿನಮಾತು ಇದನ್ನು ಸ್ಪಷ್ಟಪಡಿಸುತ್ತದೆ.

"Song begins with some sort of a tune nd to adopt real words to it is a separate and bsequent task which calls for considerable xterity. A mere tune, if hummed, can still tisfy its performers, who do not require words make it more explicit.* ಅಂದರೆ, ಹಾಡು ಕೆಲವುಧ್ವನಿ ಂಗಗಳಿಂದ (ಧಾಟಿಯಿಂದ) ಪ್ರಾರಂಭವಾಗುತ್ತದೆ. ಅದಕ್ಕೆ ಯಾದ ಶಬ್ದಗಳನ್ನು ಜೋಡಿಸುವದು ನಂತರದ ಕೆಲಸ. ಆ ರ್ಯಕ್ಕೆ ಸಾಕಷ್ಟು ಕುಶಲತೆ ಬೇಕು. ಉತ್ತಮ ರೀತಿಯಿಂದ ಧ್ವನಿ ತಗೆದು ಗುನುಗುನಿಸಿದರೂ ಸಂತೋಷವಾಗುತ್ತದೆ. ರಿಗೆ ಅದನ್ನು ಸ್ಪಷ್ಟಪಡಿಸಲು ಶಬ್ದಗಳು ಬೇಕಿಲ್ಲ. ಟ್ಟಿನಲ್ಲಿ ಸನ್ನಿವೇಶಕ್ಕೆ ಅನುಗುಣವಾಗಿ ಹೊಮ್ಮಿದ ಾಟಿಯೇ) ಅರ್ಥವ್ಯಕ್ತಿಗೆ ಪ್ರತೀಕವಾಗಿನಿಲ್ಲುತ್ತದೆ. ತ ನೆಲ ಊಳುವಾಗ, ಹೆಣ್ಣುಮಕ್ಕಳು ಬೀಸುವಾಗ ಟ್ಟುವಾಗ ಹೀಗೆ ತಮ್ಮ ತಮ್ಮ ಕೆಲಸದಲ್ಲಿ ನಿರತ ಗಿದ್ದಾಗ ಅವರ ಕಾರ್ಯಕ್ಕೆ ಸಂಜೀವಿನಿಯಾಗಿ ನಿಲ್ಲುವ ಈ ನಾದ. ಸರಿಯಾದ ಸುಂದರ ಪದಗಳ ಜೋಡನೆ ಲಯದಲ್ಲಿ ಕೂಡಿ ಹಾಡಾಯಿತು : ಹಿಗ್ಗಾಯಿತು. ಅದೇ ರಿಂದ-ಜನರಿಗೆ ಸಂಚರಿಸ ಜನಪದದ ಸಾಹಿತ್ಯವಾಯಿತು.

---

* ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪುಟ - ೪೨೪.

ಆದಿ ಮಾನವನ ಉಸುರಿನಿಂದ ಉದಿಸಿದ ಈ ಹಾಡುಗಳ ಆಧುನಿಕ ಮಾನವನ ಹೃದಯವನ್ನೂ ಗೆದ್ದಿವೆ ಎಂಬುದಕ್ ಇಂದು ವ್ಯಾಪಕವಾಗಿ ನಡೆದಿರುವ ಅಧ್ಯಯನವೇ ಇದಕ್ ಸಾಕ್ಷಿ. ಭಾಷೆ ಗ್ರಾಂಥಿಕವಾಗಿ ಪ್ರೌಢ ಸಾಹಿತ್ಯ ರಚನ ಯಾಗುವ ಕಾಲದಲ್ಲಿ ಈ ಜನಪದ ಸಾಹಿತ್ಯ ಎಲೆಯ ಮರೆಯ ಹೂ. ಈ ಸಾಹಿತ್ಯ 'ವರ್ಣಕ' 'ಬಣ್ಣವಾಡು 'ಹಾಡುಗಬ್ಬ' 'ದೇಶೀಸಾಹಿತ್ಯ' ಎಂಬ ಹೆಸರುಗಳನ್ ಹೊತ್ತುಕೊಂಡು 'ವರ್ಣಕಕ್ಕಿಲ್ಲ ಲಕ್ಷಣಂ' ಎಂದು ನಸು ಕವಿಗಳಿಂದ ಅಪಚಾರ ಹೊಂದಿತು. ಚಂಪೂ ಕಾವ್ಯಕನ್ನಿಕ ಅರಮನೆಯ ಪಟ್ಟವನ್ನೇರಿ ಪಂಡಿತರ, ಅರಸರ ಪೋಷಣೆ ಯನ್ನು ಪಡೆದು ಪಟ್ಟದರಸಿಯಾದರೆ; ಹಾಡುಗಬ್ಬ ಜನಸಾ ಮಾನ್ಯರ ಗುಡಿಸಲಲ್ಲಿ ಹುಟ್ಟಿ ಅವರ ನೋವು-ನಲಿವುಗಳನ್ ಕಂಡು-ಕೊಂಡು ಅವರೊಂದಿಗೆ ಒಂದಾಗಿ ಸಂತೋಷದ ಲಾ ಹಾಡಿ ಆನಂದದ ಚಿಲುಮೆಯನ್ನು ಚಿಮ್ಮಿಸಿದವಳು. ಇವ ಸಹಜ ಸುಂದರಿ. ವಾಸ್ತವಿಕಳು. ನಿಸರ್ಗದ ಕುಸುವ ಅವಳು ಅಲಂಕಾರ ಮಾಡಿಕೊಂಡವಳು, ಕೃತ್ರಿಮ ಜೀವ ಹೊಂದಿದವಳು. ಉದ್ಯಾನದಲ್ಲಿ ಬೆಳೆಸಿದ ಕುಸುಮ. ಯಾವಾ ಲೂ ವಾಸ್ತವತೆಗೆ ಬೆಲೆಯಿದೆ. ಅಂತಲೇ ಇಂದು ಪೌರ್ವಾ ದಲ್ಲಿ ಎಂದೋ ಪಾಶ್ಚಿಮಾತ್ಯದಲ್ಲಿ ಸಂಶೋಧನಾದೃಷ್ಟಿಯಿಂ 'ಜಾನಪದ ಸಾಹಿತ್ಯದ' ಅಧ್ಯಯನ ನಡೆದಿವೆ. "ಅಮೇ ಯೊಂದರಲ್ಲಿಯೇ ೧೯೬೦ ರ ವೇಳೆಗೆ ೨೩೦ ವಿದ್ಯಾ ಕೇಂ ಗಳಲ್ಲಿ ಜಾನಪದವನ್ನು ಬೋಧಿಸಲಾಗುತ್ತಿದೆ ಎಂ

ವೇಲ್ಯಾಂಡ್ ಹ್ಯಾಂಡ್ ಅವರು 'ಅಮೇರಿಕನ್ ಫೋಕ್ ಲೋರ್ ಸೋಸಾಯಿಟಿಯ ಎಪ್ಪತ್ತನೆಯ ವಾರ್ಷಿಕ ಸಭೆಯ ಅಧ್ಯಕ್ಷ ಭಾಷಣದಲ್ಲಿ ಗುರುತಿಸಿದ್ದಾರೆಂದು" ಜಿ. ಶಂ. ಪರಮಶಿವಯ್ಯ ಹೇಳುತ್ತಾರೆ.* "ಜನಪ್ರಿಯ ಪಳೆಯುಳಿಕೆಗಳ" (Popular Antiquities) ಅಸ್ತವ್ಯಸ್ತ ಅಧ್ಯಯನದಿಂದ ಜಾನಪದದ (Folk-lore) ವ್ಯವಸ್ಥಿತ ಅಧ್ಯಯನಕ್ಕೆ ನಾಂದಿ ಹಾಡಿದ ಮೊದಲ ದೇಶ ಇಂಗ್ಲಂಡ (೧೮೭೮), ಇಂಗ್ಲಂಡದಂತೆ ಜಾನಪದಕ್ಕೆ ಆಸ್ಥೆವಹಿಸಿ ಕೆಲಸಮಾಡಿದ ಇನ್ನೊಂದು ದೇಶ ವೆಂದರೆ ಫಿನ್‌ಲ್ಯಾಂಡ್. ಅಲ್ಲಿನ ಸಾಹಿತ್ಯ ಸಂಸ್ಥೆ (Literary Society) ಜಾನಪದ ಸಂಗ್ರಹ ಕಾರ್ಯಕ್ಕೆ ಪ್ರೋತ್ಸಾಹ ಕೊಟ್ಟು ಜಗತ್ತಿನ ಜಾನಪದ ಸಂಸ್ಥೆಗಳಲ್ಲಿ ಮೊದಲ ಸ್ಥಾನ ಗಳಿಸಿದೆ. ಫಿನ್ ಲ್ಯಾಂಡ ತರುಣ ಜಾನಪದ ವಿದ್ವಾಂಸರ ಪವಿತ್ರ ಮಕ್ಕಾಎನಿಸಿದೆ." ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ತಳಹದಿ ಹಾಕಿದವರು ಜರ್ಮನ್‌ರು. (೧೮೧೨. ಕೌಟುಂಬಿಕ ಕತೆಗಳು. (Household tales).

ಹತ್ತೊಂಬತ್ತನೆಯ ಶತಮಾನದಲ್ಲಿ ಈ ಜಾನಪದ ಸಂಗ್ರಹಕಾರ್ಯ ತಕ್ಕಮಟ್ಟಿಗೆ ನಿಂತು ಹೋದಂತೆನಿಸುವದು. ಕೆಲವುಕಡೆ ಜಾನಪದ ವಸ್ತು ಸಂಗ್ರಹಾಲಯಗಳನ್ನು ನಿರ್ಮಿಸಿ ಜಾನಪದ ಕಲೆ, ಸಂಸ್ಕೃತಿಗಳನ್ನು ಬೀರುವ ವಸ್ತು ಗಳನ್ನು ಸಂಗ್ರಹಿಸಿದ್ದು ಉಂಟು. ಜಾನ್ ಬ್ರ್ಯಾಂಡ್, ಸರ್

* ಜಾನಪದ ಮೈಲಿಗಲ್ಲುಗಳು. ಮುನ್ನುಡಿ. ಪುಟ. vi

ವಾಲ್ಟರ್ ಸ್ಕಾಟ್, ಥಾಮಸ್ ಕೈಟ್ಲಿ, ಜಾನ್ ಥಾಮ್ಸ್ ಮ್ಯಾಕ್ಸ ಮುಲ್ಲರ್ ಜಾರ್ಜ್‌ಡಬ್ಲೂ ಕಾಕ್ಸ್, ಎಡ್ವರ್ಡ್‌ಟೈಲರ್, ಆಂಡ್ರ್ಯೂ-ಲಾಂಗ್, ಎಡ್ವಿನ್ ಸಿಡ್ನಿ ಹಾರ್ಟ್ಲ್ಯಾಂಡ, ಆಲ್ಫ ರ್ಡ ನಟ್, ಗೊಮ್ಮೆ ಮುಂತಾದವರು ಜಾನಪದಕ್ಕೆ ಸಂಬಂಧ ಪಟ್ಟ ವಿವಿಧ ಕ್ಷೇತ್ರಗಳಲ್ಲಿ ಕಾರ್ಯಗೈದು ಹೆಚ್ಚಿನ ಬೆಲೆ ತಂದು ಕೊಟ್ಟಿದ್ದಾರೆ. ವಿಚಿತ್ರವೆಂದರೆ-ಜಾನಪದ ಹಾಡುಗಳು ಸಾಹಿತ್ಯದ ಒಂದು ರೂಪವೆಂಬ ಭಾವನೆ ಬಂದುದು ನಮಗೆ ಪಾಶ್ಚಾತ್ಯರಿಂದ.* ಎಲ್ಲ ನಾಗರಿಕತೆಗಳಲ್ಲಿಯೂ ಸಂಸ್ಕೃತಿಯ ಮುನ್ನಡೆಯ ಪರಿಣಾಮಕ್ಕೊಳಗಾಗಿದ್ದ ವೈಚಾರಿಕ ರೀತಿಗ ಳುಳ್ಳ ಜನಸಮುದಾಯವು ಸಾಕಷ್ಟು ಪ್ರಮಾಣದಲ್ಲಿ ಇರು ತ್ತಿದ್ದು ಅವರು ಪರಂಪರೆಯಿಂದಲೂ ಶರಣತೆಯಿಂದಲೂ ಹಿಂದಿನ ಅಭಿವೃದ್ಧಿ ಕಾಲದ ಮಾನಸಿಕ ಮತ್ತು ಭೌತಿಕ ಜೀವನದ ಕೆಲವೊಂದು ಅಂಶಗಳನ್ನು ಉಳಿಸಿಕೊಂಡಿರುತ್ತಾರೆ.

ಭಾರತದ ಮಟ್ಟಿಗೆ ಹೇಳುವದಾದರೆ ಪಾಶ್ಚಿಮಾತ್ಯರ ಪ್ರಭಾವದಿಂದಲೇ ಈ ಇಪ್ಪತ್ತನೆಯ ಶತಮಾನದಲ್ಲಿ ಮನಸ್ಸನ್ನು ಬದಲಾಯಿಸಿ ಜನಪದ ಸಾಹಿತ್ಯವನ್ನು ಅಭ್ಯಸಿಸಲು ತೊಡ ಗಿದವರು ಶ್ರೀ. ಬಿ. ಕೆ. ಸರಕಾರ, ದೇವೇಂದ್ರ ಸತ್ಯಾರ್ಥಿ, ರವೀಂದ್ರ, ಕೆ. ಎಂ, ಮುನ್ಷಿ. ಶ್ರೀವಾಮನ ಚೋರಘಡೆ ಮೊದಲಾದವರು. ಕರ್ನಾಟಕದಲ್ಲಿ ೯ ನೆಯ ಶತಮಾನದಲ್ಲಿ ಕನ್ನಡದ ಕವಿ ಶ್ರೀವಿಜಯ 'ಕುರಿತೋದದೆಯುಂ ಕಾವ್ಯಪ್ರ

* ಕನ್ನಡ ಜಾನಪದ ಗೀತಗಳು. ಪುಟ -೨.
ಗದ್ದಗೀಮಠ.

ಯೋಗ ಪರಿಣತ ಮತಿಗಳ್' ಎಂದು ಜನತೆಯ ಬುದ್ಧಿ ಶಕ್ತಿಯನ್ನು ಕವಿತಾಶಕ್ತಿಯನ್ನು ಹೊಗಳಿದರೆ, ಪಂಡಿತ ವರ್ಗ ಈ ಸಾಹಿತ್ಯವನ್ನು ಸಾಹಿತ್ಯವೆಂದು ಭಾವಿಸಲೇ ಇಲ್ಲ. ಮಧುರ ಕವಿಯಂತೂ

"ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಿಂ ಕ್ಷಿತಿಯೊಳ್ ।
ಕಂಡರ್ ಕೇಳ್ದೊಡೆ ಗೋವರ
ದುಂಡುಚಿಯೆ ಬೀದಿವರಿಯೆ ಬೀರನ ಕತೆಯೆ ॥"

ಎಂದು ಹೀಗಳೆದಿದ್ದಾನೆ. ನೇಮಿಚಂದ್ರ –

'ಮಿಗೆ ಪದಮಿಡಲರಿಯದನಾ
ಲಗೆ ಪೆಲುವರ್ ಪಲಿಸವರ್ಥಮಂ ಕಾಣದ ಪ್ರೋ
ಬಗೆ ಗುರುಡರ್ ಬಗೆವೊಡೆಕ
ಬ್ಬಿಗರಕ್ಕುಮೆ ಓದುಗೇಗದಕ್ಕರಗಿವುಡರ್ ಎಂದು
ತಾತ್ಸಾರಮಾಡಿದ್ದಾನೆ.

ಇವರೇನಂದರೂ ಜನಪದ ಸಾಹಿತ್ಯದ ಹಿರಿಮೆ ಕುಂದಲ್ಲಿಲ್ಲ ಆದರೆ, ಅದರ ಗರಿಮೆಯನ್ನರಿಯುವಲ್ಲಿ ಕೆಲವು ಪಂಡಿತರು ನಿಧಾನ ಮಾಡಿದರು. ಸುಮಾರು ೧೯೩೦ ರಿಂದಿಚೆಗೆ ನಮ್ಮಲ್ಲಿ ಜನಪದ ಸಾಹಿತ್ಯದ ಅಧ್ಯಯನ ಪ್ರಾರಂಭವಾಯಿತು ಹಲಸಂಗಿ ಮಧುರ ಚೆನ್ನರು ಜನಪದ ಸಾಹಿತ್ಯ ಸಂಗ್ರಹಕಾರ್ಯಕ್ಕೆ ತೊಡಗಿದವರಲ್ಲಿ ಮೊದಲಿಗರು. ಇವರ ಹಾಗೂ ಇವರ ಗೆಳೆಯರ ಪ್ರಯತ್ನದಿಂದಾಗಿ 'ಗರತಿಯ ಹಾಡು' 'ಜೀವನ ಸಂಗೀತ' 'ಮಲ್ಲಿಗೆ ದಂಡೆ' ಇವು ಹೊರಬಂದವು. ಮಾಸ್ತಿ

ಯುವರು, ಬೇಂದ್ರೆಯವರು, ಸಿಂಪಿಯವರು ಈ ಕ್ಷೇತ್ರಕ್ಕೆ ಒಳ್ಳೆಯ ಕಾಣಿಕೆ ನೀಡಿದರು.

ಜನಪದ ಸಾಹಿತ್ಯವು ನಮ್ಮಲ್ಲಿ ಬಹುಮುಖವಾಗಿ ಬೆಳೆದು ಬಂದಿದೆ- ಬೆಳಗಿನಿಂದ ಸಂಜೆಯ ವರೆಗೆ, ಬಾಲಕರು, ಯುವಕರು, ವೃದ್ಧರು, ಸ್ತ್ರೀಯರು ಮುಂಜಾನೆ ಬೀಸುವಾಗ, ಕುಟ್ಟುವಾಗ, ಏತ ಹೊಡೆಯುವಾಗ, ರಾಶಿಮಾಡುವಾಗ, ಹಕ್ಕಿಕಾಯುವಾಗ, ಸಮುದ್ರ ದಡದವರು ನಾವೆಯಲ್ಲಿ ಹೋಗುವಾಗ ಅವರ ಮನಸ್ಸಿನ ಸಂತೋಷದ ಸೆಲೆಯೇ ಇಲ್ಲಿ ಮಡುಗಟ್ಟಿ ಸಾಹಿತ್ಯವಾಗಿದೆ. ಇದು ಹೆಚ್ಚಾಗಿ ನಿಂತಿದ್ದು ನಾಲಿಗೆಯ ಮೇಲೆಯೇ. ಇಲ್ಲಿಯ ಕವಿಗಳು ನಿರಕ್ಷರಿಗಳಿದ್ದುದರಿಂದ ಬರೆಯುವ, ಬರೆಯಿಸುವ ಗೋಜಿಗೆ ಹೋಗಲೇ ಇಲ್ಲ. ಕಂಠಸ್ಥವಾದ ಈ ಸಾಹಿತ್ಯವು ಸ್ವರ್ಗಸ್ಥರಾದವರೊಂದಿಗೆ ಸ್ವಲ್ಪಪ್ರಮಾಣದಲ್ಲಿಯಾದರೂ ನಾಶವಾಗಿ ಹೋಗಿರಬೇಕೆಂದೆನಿಸುತ್ತದೆ. ಉಳಿದ ಈ ಸೊತ್ತನ್ನು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ.

೨.ಜನಪದ ತ್ರಿಪದಿಗಳಲ್ಲಿ ಜೀವನಮೌಲ್ಯಗಳು

ದೇಹ ಅಳಿಯುತ್ತದೆ; ಕೀರ್ತಿ ಉಳಿಯುತ್ತದೆ. ಯಾವುದು ಹುಟ್ಟಿದೆಯೋ ಅದು ಸಾವನ್ನು ತನ್ನ ಬೆನ್ನಹಿಂದೆ ಕಟ್ಟಿಕೊಂಡೇ ಬಂದಿದೆ. ಮನುಷ್ಯನು ಉಳಿದ ಪ್ರಾಣಿಗಳಂತೆ ಹುಟ್ಟಿ ಸಾಯದೇ ತನ್ನ ಗುರುತನ್ನು, ತನ್ನತನವೊಂದನ್ನು ಇಲ್ಲಿ ಇ(ಬಿ)ಟ್ಟು ಹೋಗಬೇಕು. ಅದು ಒಳ್ಳೆಯದ್ದೇ ಇರಬೇಕು.

ಂತಹ ಒಳ್ಳೆಯತನದ ವ್ಯಕ್ತಿಯು ವ್ಯಕ್ತಿತ್ವಕ್ಕೆ ಬೆಲೆ ತಂದು ಕೊಡು ದೆ. ಅದೇ ಆದರ್ಶವಾಗುತ್ತದೆ. ಆಗ ಅವ[ನ] ಳಮೌಲ್ಯ ಮೌಲ್ಯ. ಜನಪದ ಕವಿಗಳು ಅಂತಹ ಅಮೌಲ್ಯ ಗುಣಗಳನ್ನು ಂಡುಮನವಾರೆ ಮೆಚ್ಚಿ ಬಾಯ್ತುಂಬ ಹಾಡಿದ್ದಾರೆ. ಕಿವಿತುಂಬ ೇಳಿದ್ದಾರೆ. ಇಲ್ಲಿಯು ಹೆಣ್ಣು-ಗಂಡುಮಕ್ಕಳಲ್ಲಿ ದೈವೀಭಾವ ಚ್ಚು. ತಮ್ಮ ದೈನಂದಿನ ಕಾರ್ಯಗಳನ್ನು ಮಾಡುವಾಗ ೇವರನ್ನು ಸ್ಮರಿಸದೇ ಇರರು. 'ಏಳುತಲೆ ಎದ್ದು ಯಾರ್‍ಯಾರ ನೆಯಾಲೆ' ಎಂದು ಎಲ್ಲ ದೇವರನ್ನು ನೆನೆಯುವಲ್ಲಿ ದೈವದ ಗ್ಗೆ ನಂಬುಗೆ, ಭಕ್ತಿ ಕಂಡುಬರುತ್ತದೆ. ಬಡತನವಿರಲಿ ತನವಿರಲಿ ಗಂಡನ ಮನೆಯೇ ಶ್ರೇಷ್ಠವೆಂದು ಬಗೆದು ಂಜೀಯ ಕುಡಿದರೂ ಗಂಡನಮನಿ ಲೇಸು' ಎನ್ನುವಲ್ಲಿ ಿದೇವರೆಂದು ಆದರ್ಶಸತಿಯಾಗುವಳು. ಹೆಣ್ಣು ಬಯು ವ ಸಹಜ ಬಯಕೆಯಾದ ಮಕ್ಕಳ ಭಾಗ್ಯವನ್ನು ಪಡೆಯಲು ಜ್ಯಭಾವನೆ ತಾಳಿ ಪ್ರಾರ್ಥಿಸುತ್ತಾಳೆ. 'ಬಾಲಕರಿಲ್ಲದ ಲಿದ್ಯಾತರ ಜನ್ಮ' ಎಂದು ಹಳಿದು 'ಅಪುತ್ರಸ್ಯ ಗತಿರ್ನಾಸ್ತಿ' ಬ ಮಾತನ್ನು ನೆನಪಿಗೆ ತಂದುಕೊಡುತ್ತಾಳೆ. ಗಂಡ ರಿಬಿಟ್ಟಾಗ ಅವನನ್ನು ಹಾದಿಗೆ ತರುವ ರೀತಿ; ಪರಸ್ತ್ರೀಯ ದ ಆಗುವ ಕೇಡನ್ನು ಹೇಳಿ, ಪತಿವ್ರತೆಯಾಗಲು ಸ್ತ್ರೀಗೆ ೀಧನ ಮಾಡುವ ಪುರುಷ ಬಳಗಕ್ಕೆ ವಿಟರಾಗದಂತೆಯೂ ಪತ್ನಿವ್ರತಸ್ಥರಾಗುವಂತೆ ಇಲ್ಲಿಯ ಸಾಹಿತ್ಯ ಸೂಚಿಸು . ಹೀಗೆ ಜನಪದಸಾಹಿತ್ಯ ತನ್ನ ವಿಶಾಲವಾದ ಕ್ಷೇತ್ರದ ಬ ಒಳ್ಳೊಳ್ಳೆ ಮೌಲ್ಯಗಳನ್ನು ಒಳಗೊಂಡಿದೆ.

ನಮ್ಮ ಹಳ್ಳಿಯ ಜನರು ಬದುಕಿನ ವಿವಿಧ ಪದರು ಗಳನ್ನು ಬಿಚ್ಚಿನೋಡಿದವರು. ಬದುಕಿನಲ್ಲಿ ವಸ್ತು ವಡೆವೆಗಳಿಗೆ ಅವರು ಬೆಲೆಕೊಟ್ಟವರಲ್ಲ. ಬದುಕಿಗೆ ಯಾವುದು ಬೆಲೆಕೊಡು ತ್ತದೆಯೊ, ಯಾವುದಿಲ್ಲದೆ ಬದುಕು ನೀರಸವೆನಿಸುತ್ತದೆಯೊ ಅಂತವುಗಳನ್ನು ಒಳಗೊಂಡವರು. ಇನ್ನೊಬ್ಬರಿಗೆ ಹೇಳಿದವರು ಇಂದು ವಿಜ್ಞಾನ ಇಷ್ಟು ಮುಂದುವರೆದಿದ್ದರೂ ತೃಪ್ತಿಯಿಲ್ಲ, ನೆಮ್ಮದಿಯಿಲ್ಲ- ಇದಕ್ಕೆ ಕಾರಣ ನಮ್ಮ ಜೀವನದ ಮೌಲ್ಯ ಗಳನ್ನು ಗಾಳಿಗೆತೂರಿದ್ದು. ಆದರೆ ಜನಪದಸಾಹಿತ್ಯದಲ್ಲಿ ಮೂಡಿಬಂದಿರುವ ಭಕ್ತಿ; ಪ್ರೀತಿ; ಸಹನೆ; ನೀತಿ; ತ್ಯಾಗ ಈ ಈ ಮುಂತಾದ ಮೌಲ್ಯಗಳಿಂದ ಅಂದಿನ ಅವರು ತಮ್ಮ ಜೀವ ನವನ್ನು ಸುಂದರಗೊಳಿಸಿದ್ದರು. ಅವರ ಸುಂದರ ಬದುಕಿನ ಒಂದೊಂದು ಮೌಲ್ಯಗಳನ್ನು ನೋಡೋಣ.

ಪ್ರೀತಿ : ಜನಪದಸಾಹಿತ್ಯದಲ್ಲಿ ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳಿಬ್ಬರೂ ಭಕ್ತಿಗೆ ಸಮಾನವಾದ ಸ್ಥಾನವನ್ನು ಕೊಟ್ಟಿ ದ್ದಾರೆ. ಹೆಣ್ಣುಮಕ್ಕಳು ದೈವವನ್ನು ಪೂಜಿಸುವುದರ ಜೊತೆಗೆ ಪತಿದೇವರೆಂದು ಬಗೆದು ಗೌರವಿಸುತ್ತಾರೆ. ಇಲ್ಲಿ ಪತಿಭಕ್ತಿ ಯನ್ನೂ ದೈವಭಕ್ತಿಯನ್ನೂ ಕಾಣುತ್ತೇವೆ. ನಮ್ಮ ಜನ ನಿಸ ರ್ಗದ ಪ್ರತಿಯೊಂದು ವಸ್ತುವಿನಲ್ಲಿ ದೈವೀ ಅಂಶವನ್ನು ಕಂಡು ಕೊಂಡವರು. ಧರ್ಮಕ್ಕಿಂತ ದೇವರಿಗೆ ಹೆಚ್ಚುಬೆಲೆ ಕೊಟ್ಟ ವರು. "ತೇನ ವಿನಃ ತೃಣಮಪಿ ನ ಚಲತಿ" ಎಂದು ಕೃಷ್ಣ

ನ್ನು ಕುರಿತು ಹೇಳಿದ ಮಾತನ್ನು ಇವರು ಅನುಸರಿಸಿದವರು. ಈ ಭೂಮಿ, ಈ ಬೆಳೆ, ಸುಳಿದು ಬೀಸುವ ಗಾಳಿ ಇವೆಲ್ಲ ರಮಾತ್ಮ ಕೊಟ್ಟ ದಾನಗಳು. ಅವುಗಳಿಂದ ಕೃತಾರ್ಥ ಾದ ಮುಗ್ಧಜೀವಿಗಳು ಅನ್ಯರನ್ನು ಹೊಗಳಲು ವಿಚಾರ ಮಾಡುತ್ತವೆ.

ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಮಾಡುವ ಅವರ ಕಾರ್ಯದ ಹಿಂದೆ ದೈವೀ ಚೈತನ್ಯವಿದೆ. 'ನಂಬಿ ಕರೆದರೆ ಎನ್ನನೆ ಶಿವನು' ಅಂತಲೇ ಅವರು ನಿರೀಕ್ಷಿಸಿದಷ್ಟು ಬೆಳೆಯು ್ತಿದ್ದರು. ಅವರ ನಿಷ್ಕಲ್ಮಶ ಭಕ್ತಿಗೆ ಯಾವಾಗಲೂ ಒಳ್ಳೆ ುದೇ ಆಗುತ್ತಿತ್ತು. ಕುರುಬ ಕಂಬಳಿ ಬೀಸಿದರೆ ಮಳೆ ರುತ್ತದೆ ಎಂಬ ನಂಬಿಗೆ ಈಗಲೂ ಇದೆ. ಅಂತಹ ಪರಿಶುದ್ಧ ಾದ ಹೃದಯ ಅವರದು. ನಮ್ಮ ಹಳ್ಳಿಯ ಹೆಣ್ಣು ಮಕ್ಕಳು ದಕ್ಕೆ ಹೊರತಾದವರಲ್ಲ. ಅವರು ಮುಂಜಾನೆ ಬೇಗನೆ ದ್ದು ಭಕ್ತಿಯಿಂದ ದೇವರನ್ನು ನೆನೆಯುತ್ತಾರೆ.

ಏಳೂತಲೆ ನೆನದೇನ ಏಳೆಂಟು ದೇವರನ
ಏಳು ಬಾಗಿಲದ ಒಡಿಯಾನ। ಪರೂತಮಲ್ಲ
ಏಳುತಲೆ ಮೊದಲ ನೆನದೇನ

ಹೀಗೆ ತಾನು ಅನೇಕ ದೇವರನ್ನು ನೆನೆಯುತ್ತಾಳೆ. ಲ್ಲದೆ ಆತ್ಮೀಯತೆಯಿಂದ ಪರಮಾತ್ಮ ತನ್ನ ತಂದೆ ಎಂದು ಾರ್ವತಿಯು ತಾಯಿಯೆಂದು ಕರೆಯುತ್ತಾಳೆ. ಚನ್ನಮಲ್ಲಿ ಾರ್ಜುನನೇ ತನ್ನ ಗಂಡನೆಂದು ಹೇಳುವ ಅಕ್ಕನಂತೆ, ಈ ಗತ್ತನ್ನು ನಿರ್ಮಿಸಿದ ಸೃಷ್ಟಿಕರ್ತನಾದ ಪರಮಾತ್ಮ ತನ್ನ

ತಂದೆಯೆಂದು ಪಾರ್ವತಿ ತನ್ನ ತಾಯಿಯೆಂದುಹೇಳಿಕೊಳ್ಳುವ ಈ ಹೆಣ್ಣುಮಗಳಲ್ಲಿ ಆತ್ಮೀಯತೆ, ಭಕ್ತಿ ಎರಡೂ ಕಂಡು ಬರುತ್ತವೆ.

ಶಿವನು ನಮ್ಮಪ್ಪ ಪಾರ್ವತಿ ನಮ್ಮವ್ವ
ಮೇಲಗಿರಿ ನನ್ನ ಪರವೂತ। ದೊಳಗಿರುವ
ಮಲ್ಲಯ್ಯ ನನ್ನ ಹಿರಿಯಣ್ಣ.

ತನಗೆ ಆಧಾರಭೂತ ವಾಗಲ್ಪಟ್ಟಂತ ಭೂಮಿತಾಯಿ ಯನ್ನು ಭಕ್ತಿಯಿಂದ ಸ್ಮರಿಸಿದ್ದಾರೆ. ಉಪ್ಪುಂಡವರ ಋಣ ತೀರಿಸುವ ಪ್ರವೃತ್ತಿ ಇವರಲ್ಲಿದೆ. ತಮಗೆ ಸಹಾಯ ಮಾಡಿದವರನ್ನು ಸ್ಮರಿಸಿಕೊಳ್ಳುವುದು ಉತ್ತಮ ಸಂಸ್ಕೃತಿಯ ಪ್ರತೀಕ. ಭೂಮಿತಾಯಿಯ ಮ[ಉ]ಡಿಲಲ್ಲಿ ಬೆಳೆದು ಸಂತೋಷ ಗೊಂಡ ಮನ ತನ್ನನ್ನು ರಕ್ಷಿಸಿದ ಆ ಮಹಾತಾಯಿಯನ್ನು ಸ್ಮರಿಸದೇ ಇರಬಹುದೇ ? ಅದಕ್ಕಾಗಿಯೇ–

"ಬೆಳಗಾಗಿ ನಾನೆದ್ದು ಯಾರ‍್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆವಂಥ। ಭೂಮಿತಾಯಿನ
ಎದ್ದೊಂದ ಘಳಿಗೆ ನೆನದೇನ।"

ಎಂದು ಒಂದು ಗಳಿಗೆ ಎಳ್ಳು–ಜೀರಿಗಿಯನ್ನು ಮಿಕ್ಕ ಬೆಳೆಯನ್ನು ಬೆಳೆದು ಉಪಕರಿಸಿದ ಅನ್ನದಾತೆಯನ್ನು ಅನ್ನ ಪೂರ್ಣೆಯನ್ನು ನೆನೆಯುತ್ತಾಳೆ.

"ಅತ್ತೆ ಮಾವಗ ಶರಣು ಮತ್ತೆ ಗುರುವಿಗೆ ಶರಣು
ಮತ್ತೊಂದು ಶರಣು ಶಿವನಿಗೆ। ಒಪ್ಪಲೆಂದು
ನಾ ಬಗ್ಗೇನಿ ಮನೆಯ ಕೆಲಸಕ್ಕೆ

ಎಂದು ಓರ್ವಗೃಹಿಣಿ ಅತ್ತೆ ಮಾವಂದಿರರಿಗೆ ಶರಣು ಮಾಡಿ ಶಿವನನ್ನು ನೆನೆಸಿ ತನ್ನ ಮನೆಗೆಲಸವನ್ನು ಸುರು ಮಾಡುತ್ತಾಳೆ. ಪ್ರತಿಯೊಂದು ಕಾರ್ಯದಲ್ಲಿ ಭಕ್ತಿ ಒಂದಾಗಿ ನಿಂದಿದೆ. ತಾನು ಬೀಸುವ, ಕುಟ್ಟುವ ಕಾರ್ಯಗಳನ್ನು ಕೇವಲ ಕಾಡುವ ಕಾಟಕ್ಕೆ ಮಾಡುವ ಕೆಲಸವೆಂದು ಯಾಂತ್ರಿಕ ವಾಗಿ ಮಾಡಿಮುಗಿಸದೆ ಅದರಲ್ಲಿ ಆನಂದವನ್ನು ಹೊಂದು ತ್ತಾಳೆ. ಅಲ್ಲದೆ ಬದುಕು ಸಾಧಿಸಬೇಕಾದುದನ್ನು ಹೀಗೆ ಹೇಳು ತ್ತಾಳೆ.

"ದೇವರ ನೆನದರ ಸಾವ್ಹುಟ್ಟು ನಮಗಿಲ್ಲ
ಹಾವು ಕಚ್ಚಿದರು ವಿಷವಿಲ್ಲ| ಸರ್ಪದ
ಹೆಡೆಯ ದಾಟಿದರೂ ಭಯವಿಲ್ಲ"

ಪರಮಾತ್ಮನನ್ನು ನೆನೆದರೆ ಬದುಕಿಗೆ ಮುಕ್ತಿ ಯಾವು ದನ್ನು ಪಡೆಯುವದಕ್ಕೆ ತಾಪ ಮಾಡಬೇಕೋ? ಯಾವುದಕ್ಕೆ ಕೆಲವರು ಮನೆ ಮಠ ಬಿಟ್ಟರೋ ಯಾವುದಕ್ಕಾಗಿ ಶರೀರ ವನ್ನೇ ದಂಡಿಸಿದರೋ ಅಂತಹುದನ್ನು ನಮ್ಮ ಜನ ಎಷ್ಟು ಸಲೀಸಾಗಿ ಸಾಧಿಸಿದ್ದಾರೆ ನೋಡಿ. ಆತನ ಕರುಣೆಯೊಂದಿ ದ್ದರೆ ನಮಗಾವ ಭಯವಿಲ್ಲ. ಹಾವು ಕಚ್ಚಿದರೂ ವಿಷ ಏರು ವುದಿಲ್ಲ. ಸರ್ಪದ ಹೆಡೆ ದಾಟಿದರೂ ಯಾವ ಭೀತಿಯಿಲ್ಲ. ಪರಮಾತ್ಮ ತನಗಿಷ್ಟ ಬಂದಂತೆ ಮಾಡಲಿ ಎಂದು ಎಲ್ಲ ಭಾರ ವನ್ನು ಆತನ ಮೇಲೆ ಹೇರಿಬಿಡುತ್ತಾರೆ. ಅಲ್ಲದೆ 'ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ' ಎಂದು ಹೇಳಿ ತಾನು ಆತ ನಡೆಸುವಂತೆ ನಡೆಯುವ ಸೂತ್ರದ ಗೊಂಬೆ ಎಂದು ಬಗೆದಿದ್ದಾಳೆ. ತಾನು ಮಾಡಿದೆನೆಂಬ ಗರ್ವ ಆವಳಲ್ಲಿಲ್ಲ.

"ಮಹಾದೇವ ನಿನಹೊರ್ತು ನಾನ್ಯಾರ್ನೂ ನಂಬಿಲ್ಲ
ನಾ ಮಾಡೆನೆಂಬ ಅಳವಿಲ್ಲ। ಮಲ್ಲಯ್ಯ
ನೀ ನಡೆಸು ನನ್ನ ಸರುವೆಲ್ಲ"

ಎಂದು ದೇವರಲ್ಲಿ ಭಕ್ತಿಪೂರ್ವಕ ಬೇಡಿಕೊಳ್ಳುತ್ತಾಳೆ. ದೇವರೇ ನಿನ್ನನ್ನು ಬಿಟ್ಟು ನಾ ಯಾರನ್ನೂ ನಂಬಿಲ್ಲ ನಾ ಮಾಡುವೆನೆಂಬ 'ಅಹಂ' ನನ್ನಲ್ಲಿಲ್ಲ ಅದು ನನ್ನ ಅಳವಲ್ಲ. ನೀನೇ ಇದಕ್ಕೆ ಸೂತ್ರಧಾರ. ಜೀವ ಸಾಗರ ದಾಟಿಸುವ ಅಂಬಿಗ. ನಿನ್ನನ್ನೇ ನಂಬಿದೆ ಎಂದು ಹೇಳಿ ವೈಯಕ್ತಿಕ ಸುಖ ಬಯಸದೆ ತನ್ನ ಕುಟುಂಬದ, ಸಮಾಜದ ಹಿತದೃಷ್ಟಿಯಿಂದ ಬೇಡಿಕೊಂಡಿದ್ದಾಳೆ. 'ಸರುವೆಲ್ಲ' ವೆಂಬ ಪದ ಇದೇ ಅರ್ಥ ಕ್ಕಾಗಿ. ಹೀಗೆ ತಮ್ಮ ಸುತ್ತ ಮುತ್ತಲಿನ ದೇಶ-ಪ್ರದೇಶಗಳ ದೇವರ ಹೆಸರುಗಳನ್ನು ತೆಗೆದುಕೊಂಡು ಮನೆ ದೇವರನ್ನೊ ಊರದೇವರನ್ನೋ ಭಕ್ತಿಯಿಂದ ಪೂಜಿಸಿ ಭಾವ ಪರವಶ ರಾಗುವರು. "ಅನೇಕ ಶಕ್ತಿಗಳ ದೇವತೆಗಳ ಉಪಾಸನೆ ಕಂಡರೂ ಯಾವೊಂದು ಶಕ್ತಿಯನ್ನು ಲೌಕಿಕ ಸುಖಕ್ಕಾಗಿ ತೃಪ್ತಿಪಡಿಸುವ ಸ್ವಾರ್ಥ ಕ್ರಿಯೆಗಳು ಇಲ್ಲಿ ಕಾಣಿಸವು. ನಾಮ ಬೇರೆಬೇರೆಯಾದರೂ ದೇವನೊಬ್ಬನೇ ಎಂಬ ಉದಾತ್ತ ಮನ ಸ್ಸಿನ ತಿಳಿಯಾದ ಭಕ್ತಿಭಾವನೆ ಇವುಗಳಲ್ಲಿದೆ."* ಇದು ಒಂದು ತೆರನಾದ ಭಕ್ತಿಯಾದರೆ ಪತಿ ಭಕ್ತಿ ಇನ್ನೊಂದು ತೆರನಾದುದು.

---

*ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪುಟ ೪೩೭

ಸತಿಗೆ ಪತಿಯೇ ದೇವರೆಂದು ನಂಬಿರುವುದ, ನಮ್ಮ ಜನತೆಯು ಒಂದು ಮೌಲ್ಯ. ಪತಿಯೇ ಸರ್ವಸ್ವ. ಮಾಂಗಲ್ಯವೇ ಭಾಗ್ಯ ಆ ಸ್ತ್ರೀಗೆ ಆದ್ದರಿಂದ ಆ ಪತಿಯಲ್ಲಿ ಸತಿಗೆ ಭಕ್ತಿ, ಗೌರವ ಮೂಡಿಬಂದಿದೆ. ಪತಿದೇವರೆಂದು ಭಾವಿಸದ ಹೆಣ್ಣು ಮಗಳನ್ನು ಸಮಾಜ ತಿರಸ್ಕರಿಸುತ್ತಿತ್ತು. ಜನ ಅವಳಿಗೆ ಅನ್ನುತ್ತಿದ್ದರು.

"ಛೀ ಏಳ ಛೀಮಾರಿ ನಾಚಿಕಿಲ್ಲದ ನಾರಿ
ಗಂಡನ್ನ ಬೈಯ್ವ ಗಯ್ಯಾಳಿ| ಗಂಡಗ
ಅಂವ ಇಂವನೆಂದು ಕರದಾಳ"

ಹೀಗೆ ಗಂಡನಿಗೆ ಮರ್ಯಾದೆ ಕೊಡದ ಹೆಣ್ಣಿಗೆ ಬೈದು ಬುದ್ಧಿ ಕಲಿಸಿ; ಗಂಡ ಕೂಲಿಮಾಡುತ್ತಿದ್ದರೂ ಆತ ಶ್ರೇಷ್ಠ ಆದಕ್ಕಾಗಿ ನೀನು ಪತಿಸೇವೆ ಮಾಡಬೇಕೆಂದು ಹೇಳುತ್ತಾರೆ.

ಪ್ರೀತಿ : ಗಂಡು ಹೆಣ್ಣಿನಲ್ಲಿ ತೋರಿಬರುವ ಪ್ರೀತಿ ಜನಪದ ಸಾಹಿತ್ಯದ ಗೌರಿಶಂಕರ, ಪ್ರೀತಿ ಎಂಬ ಪದಕ್ಕೆ ಪರ್ಯಾಯ ಪದಗಳು ಇವೆ. ಗಂಡು-ಹೆಣ್ಣುಗಳಲ್ಲಿ ಪ್ರಣಯ, ಗಂಡ-ಹೆಂಡತಿಯರಲ್ಲಿ ಪ್ರೇಮ, ತಾಯ್ತಂದೆ ಮಕ್ಕಳಲ್ಲಿ ವಾತ್ಸಲ್ಯ, ಗೆಳೆಯ ಗೆಳತಿಯರಲ್ಲಿ ಪ್ರೀತಿ ಹೀಗೆ ಪರ್ಯಾಯವಾಗಿ ಬಳಸಲ್ಪಟ್ಟಿರುವುದು. ಕಂಡು ಬರುತ್ತದೆ. 'Love is God' ಪ್ರೀತಿಯೇ ದೇವರು ಇಂತಹ ಪ್ರೀತಿಯಲ್ಲಿ ಆತ್ಮೀಯತೆ, ಅನುಕಂಪ, ಕರುಣೆ ಮುಂತಾದ ಮಾನವೀಯ ಅಂಶಗಳು ಒಳಗೊಂಡಿರುತ್ತವೆ.

ಗಂಡು ಹೆಣ್ಣಿನಲ್ಲಿ ಪ್ರಣಯ :

ಗಂಡು-ಹೆಣ್ಣು ಪರಸ್ಪರ ಒಬ್ಬರನ್ನೊಬ್ಬರು ನೋಡಿ ಆಕರ್ಷಿಕರಾಗುತ್ತಾರೆ. ದುಂಡಗಿನ, ಬೆಳ್ಳನೆಯ, ಮುಖ, ಎಸಳಾದ ನಾಸಿಕ, ನೇತಾಡುವ ಮುಂಗುರುಳು, ಕುಳಿಬೀಳುವ ನುಣುಪಾದ ಗಲ್ಲ, ಎದ್ದು ಕಾಣುವ ವಕ್ಷ, ನೀಳವಾದ ಜೈತಲೆ, ಉದ್ದನೆಯ ಕಪ್ಪಾದ ಕುರುಳು, ಹಂಸದಂತಹ ನಡೆ-ಇವು ಗಂಡಿಗೆ ಆಕರ್ಷಿತವಾಗಿ ಕಂಡರೆ; ಚೂಪಾದ ಗದ್ದ, ವಿಶಾಲವಾದ ಹಣೆ, ಎತ್ತರದ ನಿಲುವು, ಮುಖದಲ್ಲಿಯ ಮಂದಹಾಸ, ನೀಳವಾದ ನಾಸಿಕ, ಚಿಗುರು ಮೀಸೆ ಇವು ಹೆಣ್ಣಿನ ಮನ ಸೆಳೆಯುತ್ತವೆ. ಹೀಗೆ ಪರಸ್ಪರವಾಗಿ ಆಕರ್ಷಿತವಾದ ಎರಡು ಜೀವ ಒಂದಾಗ ಬಯಸುತ್ತವೆ. ಇಲ್ಲಿ ಆ ಸೊಬಗು ನೋಡಬಹುದು.

ಕಾಕು ಹಾಕುದ ಕಂಡು ಬೇಕಾಗಿ ನಾ ಬಂದೆ
ಬಾರೋ ನನ ಗೆಣೆಯಾ ಬೈಲೀಗಿ ನಾನೆಂದು
ಬಾಸೆ ತಪ್ಪೊಂತ ಮಗಳಲ್ಲ

ನಲ್ಲನ ಮಧುರ ಧ್ವನಿಯನ್ನು ಕೇಳಿ ಬೇಕಾಗಿ ಬಂದಿದ್ದಾಳೆ. ಒಬ್ಬ ಹೆಣ್ಣು ಭಾಷೆ ಕೊಟ್ಟು ತಪ್ಪಿಸುವವಳಲ್ಲ. ತನ್ನ ಮನದ ಬಯಕೆ ಈಡೇರಿಸಿಕೊಳ್ಳಲು ಬಯಲಿಗೆ ಕರೆಯುತ್ತಾಳೆ. ಜೀವನದಲ್ಲಿ ಪ್ರಣಯ ಮೂಡಿಬಂದರೇನೇ ಬಾಳು. ಇಲ್ಲದಿದ್ದರೆ ಬರೀ ಗೋಳು. ಪ್ರಣಯ ಜೀವನದ ವಸಂತಕಾಲ. ಬಿಸಿಲು, ಮಳೆ, ಗಾಳಿಯೆನ್ನದೆ ಹಗಲಿರುಳು ಹೊಲದಲ್ಲಿ

ದುಡಿಯುವ ಜೀವಕ್ಕೆ ಹಾ! ಎನಿಸುವ ಆನಂದ ಬೇಕಾಗು ವುದು. ನೆರೆತು ಪ್ರಾಯತುಂಬಿದ ಗಂಡು-ಹೆಣ್ಣು ಪರಸ್ಪರರು ಬಯಲಿನಲ್ಲಿ, ಯಾರಿಲ್ಲದಾಗ, ಜುಳು_ಜುಳು ಹರಿಯುವ ಹಳ್ಳದ ದಂಡೆಯಲ್ಲಿ, ತಂಗಾಳಿ ಬೀಸುವಾಗ ದಿಟ್ಟಿಸಿನೋಡಿ ದರೆ ಏನನಿಸಿರಬಹುದು "?Love at First Sight" ಎನ್ನು ವಂತೆ ಅವರಲ್ಲಿ ಅನುರಾಗ ಮೂಡಿ ಬಂದಿರಬೇಕು. ಆ ಮನದ ಬಯಕೆ ತೀರದೇ ಇದ್ದಾಗ ಅವನು ಅವಳನ್ನು ಮರೆಯುವುದಾದರೂ ಹೇಗೆ ? ಅದಕ್ಕಾಗಿಯೇ ಆತ

ಹೊಳೆಯ ದಂಡೆಯ ಮ್ಯಾಲ ಎಳೆಯ ಸವತಿ ಕಾಯಿ
ಹರಿಯಂದರ್ಹ್ಯಾಂಗ ಹರಿಯಲೆ| ಎಲೆ ಹುಡುಗಿ
ಮರಿಯಂದರ್ಹ್ಯಾಂಗ ಮರಿಯಲೆ

ಮೈತುಂಬಿದ ಪ್ರಾಯದ ಹುಡುಗಿ ಎಳೆಯ ಸವತಿ ಕಾಯಿ ಈ ಗಂಡಿಗೆ. ಈ ಗಂಡಿನ ಸಂಪರ್ಕಕ್ಕೆ ಅವಳು ಬಯಸಿದರೆ ನಾ ಹ್ಯಾಂಗ ಹರೀಲಿ ನಿನ್ನ ಹ್ಯಾಂಗ ಮರೀಲಿ ? ಎಂದು ಗಂಡು ಚಿಂತಿಸುತ್ತದೆ. ಆಗ ಆವಳೇ ಒಂದು ಉಪಾಯ ಹುಡುಕಿದ್ದಾಳೆ ಮೇಲೆ ಚಳಿಜ್ವರ ಒಳಗೆ ಬೇರೆ ಜ್ವರ.

ಚಳಿಜ್ವರ ಬಿಟ್ಟಾವ ಒಳಜ್ವರ ಬಿಡಲಿಲ್ಲ
ಮಂಟಪದ ಜಾಜಿ ಮನೆಯನೆ| ಸರದಾರ
ಮಂತ್ರಿಸಿ ಹೋಗೋ ತಲೆನೋವ||

ಎಂದು ಕೇಳುವ ಆ ರೋಗಿಗೆ ನಲ್ಲನೇ ಒಳ್ಳೆಯ ಡಾಕ್ಟರ. ಆವನ ಪ್ರೀತಿಯ ಕರಸ್ಪರ್ಶದಿಂದ ಆವಳ ನೋವು ಮಾಯವಾಗಿ ಮನಸ್ಸು ಉಲ್ಲಸಿತಗೊಂಡು ಹಗುರಾಗುವುದು.

ಆದರೆ ಅದಕ್ಕೆ ಆ ನಲ್ಲ ಒಪ್ಪುವನೆ? ಆಗ ಕನ್ಯೆ ಈಗ ಗೃಹಿಣಿ ಅವಳನ್ನು ಮೋಹಿಸಬಾರದೆಂದು ಅವನ ಅಂತರಂಗ ಹೇಳುತ್ತದೆ. ಗೃಹಿಣಿಯನ್ನು ಗರತಿಯೆಂದು ಕರೆದಿದೆ. ನಮ್ಮ ಜನಪದ. ಆದ್ದರಿಂದ ಆ ದಾರಿಯನ್ನು ಮರೆಯಲು ಪ್ರಯ ತ್ನಿಸುತ್ತಾನೆ.

ಇನ್ನೂ ಮದುವೆಯಾಗದ ಗಂಡು-ಹೆಣ್ಣು ಪರಸ್ಪರ ಮಾತನಾಡಬೇಕೆಂದು ಬಯಸುವರು. ಸ್ವತಂತ್ರವಾಗಿ ಎಲ್ಲಿ ಗಾದರೂ ಹೋಗಿ ಕೂಡಬೇಕೆಂದು ಇಚ್ಛಿಸುವರು. ಅದಕ್ಕೆ ಹಬ್ಬ-ಹರಿದಿನಗಳು, ಜಾತ್ರೆ-ಕ್ಷೇತ್ರಗಳೇ ಒಳ್ಳೆಯ ಅವಕಾಶ ಅದಕ್ಕಾಗಿ ಒಬ್ಬಳು

ಜಾತರಿಗ್ಹೋಗುದಕ, ರಾತರೀಲಿ ಎದ್ದಾಳ
ಧೋತರ ತುಂಬ ಕರಿಗಡಬ ಕಟಗೊಂಡು
ಜಾತ-ಜಾತರಿ ಹುಡುಕ್ಯಾಳ।

ಜಾತ್ರೆಗೆ ಹೋಗುವದರ ಸಲುವಾಗಿ ನಸುಕಿನಲ್ಲಿ ಎದ್ದು ಕರಿಗಡುಬು ಮಾಡಿಕೊಂಡು ಧೋತರ ತುಂಬ ಕಟ್ಟಿಕೊಟ್ಟಿ ದ್ದಾಳೆ. ತಾನು ಒಬ್ಬಳೇ ಬಂದಿದ್ದರೂ ಮನೆಯಲ್ಲಿ ಜಾತ್ರೆಯ ನೆಪಹೇಳಿ ತನ್ನ ಪ್ರಿಯನಿಗಾಗಿ ಸಾಕಷ್ಟು ಕಡುಬು ಮಾಡಿ ಕೊಂಡು ಜಾತ್ರೆಯ ತುಂಬ ಅವನನ್ನು ಹುಡುಕುತ್ತಾಳೆ. ತನ್ನ ನಲ್ಲ ಸಿಕ್ಕಾಗ ಅವಳಿಗೆ ಆನಂದ ಹೇಳತೀರದು. ಆತುರ ದಿಂದ ಕೆರೆಯದಡದೆಡೆ ಓಡುತ್ತಾ ಬರುತ್ತಾಳೆ. ತಾನು ತಂದ ಕರಿದ ಕರಚಿಕಾಯಿಯ ಗಂಟನ್ನು ಬಿಚ್ಚುತ್ತಾಳೆ. ಪ್ರೀತಿಯಿಂದ ತಿನಿಸುತ್ತಾಳೆ.

ಕರಡ ಕರಚಿಕಾಯಿ ಕರಿ ಅರಿವ್ಯಾಗ ಕಟಗೊಂಡು
ಎರಿಯ ಎಮನೂರ ಕೆರಿಮ್ಯಾಲ ! ಆ ಹುಡುಗಿ
ಸೆರಗ ಮರಿಮಾಡಿ ತಿನಿಸ್ಯಾಳ

ತಾನು ಪ್ರೀತಿಯಿಂದ ತನಗೆ ಬೇಕಾದವನಿಗೆ ಕಡಬು ತಿನಿಸುವ ದೃಶ್ಯ ಇನ್ನೊಬ್ಬರು ನೋಡಬಾರದೆಂದು ಮನದಲ್ಲಿ ಅಳುಕಿಯೋ ಯಾರಾದರೂ ತಮ್ಮ ಕೆಟ್ಟ ಕಣ್ಣುಗಳಿಂದ ನೋಡಿದರೆ ತನ್ನವನ ಹೊಟ್ಟೆ ಕೆಟ್ಟೀತೆಂದೋ ಅಥವಾ ಗಾಳಿ ಬೀಸಿದರೆ ಹುಡಿ ಬೀಳಬಾರದೆಂದೋ ಏನೊ ತನ್ನ ಸೆರಗು ಮರೆಮಾಡಿ ತಿನಿಸುತ್ತಾಳೆ. ಎಂತಹ ಪ್ರೀತಿ !

ಮತ್ತೊಬ್ಬನು ಒಂದು ಸುಂದರ ಹೆಣ್ಣಿಗೆ ಮರುಳಾಗಿದ್ದಾನೆ.

ಜ್ವಾಳದ ಕಣ್ಣಿನ ಸೀರಿ ಜೋತಾಡು ಮಳದುರಬ
ಮಾತಾಡದವಳ ಗೆಣಿತಾನ ! ಮಾಡಿದರ
ಹಾತೊರೆದು ಹಾಲು ಕುಡಸೂಳ.

ಜೋಳದ ಕಣ್ಣಿನಂತಹ ಸಣ್ಣ–ಸಣ್ಣ ಹೂ ಚಿತ್ರಗಳಿಂದ ಕೂಡಿದ ಸೀರೆಯನ್ನುಟ್ಟ ಜೋತಾಡುನಂತಹ ದೊಡ್ಡ ತುರುಬನ್ನು ಬಿಟ್ಟ ಗಂಭೀರಳಾದವಳ ಜೊತೆ ಗೆಳೆತನ ಮಾಡಿದರೆ ಹಾತೊರೆದು ಹಾಲು ಕುಡಿಸುವಳು. ಅವಳಲ್ಲಿ ಸಾಕಷ್ಟು ಸೌಂದರ್ಯವಿದೆ ಅದಕ್ಕೆ ಯಜಮಾನ ಇಲ್ಲ. ಅವಳ ಇಂಗಿತವನ್ನು ತಿಳಿದುಕೊಂಡು ಪ್ರೀತಿ ಮಾಡಿದರೆ ಅವಳು ಅವನಿಗೆ ಹಾಲು ಕುಡಿಸುತ್ತಾಳೆ. ಅದಕ್ಕಾಗಿ ಅವನೂ ಸಹಿತ ಓಡೋಡಿ ಹಾತೊರೆದು ಅವಳೆಡೆಗೆ ಬರುತ್ತಾನೆ.

ಕಾಡೀಗಿ ಕಣ್ಣಿನ ಕೂಡಿದ್ದುಬ್ಬಿನ್ಹೆಣ್ಣ
ಬೇಡ್ಯಾವ ನಿನ್ನ ನನಜೀವ। ನಿನ್ನೋಡಿ
ಓಡಿ ಬಂದೀನಿ ಕೂಡುದಕ

ಅವಳ ಕಾಡಿಗೆ ಕಣ್ಣಿಗೆ, ಕೂಡಿದ ಹುಬ್ಬಿಗೆ ಮರುಳಾಗಿ; ಅದಕ್ಕಿಂತ ಹೆಚ್ಚಾಗಿ ಅವಳ ನಿರ್ಮಲ ಮನಸ್ಸಿಗೆ ಮಾರು ಹೋಗಿ ಕೂಡಲು ಓಡಿ-ಓಡಿ ಬರುವ ಆ ಗಂಡು ಜೀವನದ ಪವಿತ್ರ ಮನ, ಅದನ್ನು ಸ್ವಾಗತಿಸುವ ನಿರ್ಮಲ ಚಿತ್ತದ ಹೆಣ್ಣು ಹೃದಯ ಒಂದಾಗುವದು, ಬರೀ ಗಂಡು-ಹೆಣ್ಣಿನ ಮಿಲನ ವಾಗದೆ ಪ್ರಕೃತಿ ಪುರುಷರ ಮಿಲನವಾಗುವದು.

ಹರೆಯದ ಇಂತಹ ಎಷ್ಟೋ ಹೆಣ್ಣು-ಗಂಡು ಒಂದಾಗ ಬಯಸುತ್ತವೆ. ಇಲ್ಲಿ ಜಾತಿಯ ಪ್ರಶ್ನೆ ಬರುವದಿಲ್ಲ. ಪ್ರೀತಿಗೆ ಜಾತಿಯ ಮುಸಿ ಬಳಿಯಬೇಕೆ ? ಅದಕ್ಕೆ ಇಲ್ಲಿಯ ಬೇರೆ-ಬೇರೆ ಜಾತಿಯ ಹೆಣ್ಣುಗಳು ಪ್ರೀತಿಸುವ ಮಾರ್ಗನೋಡಿ.

ಮಳ್ಳ ಜಾಡರ ಹುಡುಗಿ ಹಳ್ಳದ ನೀರಿಗೆ ಹೋಗಿ
ಬಳ್ಳ ತಿರವೂದ ಕಲತಾಳ | ಆ ಹುಡುಗಿ
ಕಂಡಕಿ ಸುತ್ತೂದ ಮರತಾಳ.
ಮುಸಲರ ಹುಡುಗಿಯ ಖುಸಿಯೇನ ಹೇಳಲಿ
ಕಸಕಸಿ ಉಂಡಿ ಉಡಿಯಾಗ ! ಕಟಗೊಂಡು
ಕಸಕ ಬಂದಲ್ಲಿ ತಿನಸ್ಯಾಳ

ಇನ್ನೊಬ್ಬಳು—

ಪತ್ತsಲ ಉಡುವೂಳ. ಹಿತ್ಲಾಗ ನಿಂದರೊಳ

ನತ್ತನಲನಲಗ್ಸಿ ನಗವ್ಯಾಳ । ಹುಡುಗಿ ಕಂಡ
ಹಿತ್ತಲ ಗ್ವಾಡಿ ಜಿಗಿದಾನ.

ಹೀಗೆ ಪತ್ಲ ಉಟುಕೊಂಡು ನತ್ತನ್ನು ಅಲುಗಾಡಿಸಿ ನಸುನಗುವ ಚಂದ್ರಿಕೆಯಂತಹ ಚೆಲುವೆಗೆ ಮರುಳಾಗಿ ತಾಳ ಲಾರದ ಜೀವದಿಂದ ಹಿತ್ತಲದ ಗೋಡೆಯನ್ನೇ ಜಿಗಿಯುತ್ತಾನೆ. ಅವಳ ಪ್ರೀತಿಗೆ ತನ್ನ ಜೀವದ ಭಯವಿಲ್ಲ. ತನಗೆ ನೋವು ಬಂದರೂ ಅದಕ್ಕೆ ಅವನು ಲೆಕ್ಕಿಸುವದಿಲ್ಲ. ಹೀಗೆ ಒಳಗೆ ಬಂದವನನ್ನು ಕಂಡ ಆಕೆಗೂ ಅಷ್ಟೇ ಪ್ರೀತಿಯಿದೆ. ಕಾಳಜಿ ಯಿಂದ ಅದಕ್ಕಾಗಿ ಆಕೆ ಹೀಗೆ ಹೇಳುತ್ತಾಳೆ.

ಹಿತ್ತಲ ಜಿಗಿಬ್ಯಾಡ ಕೈಮುಂಡಿ ಮುರದಾವ
ಸುತ್ತಾದ್ಹ ಬಾರೊ ಸುಬೆದಾರ । ನನ್ಹೊರತು
ಮತ್ಯಾರು ಇಲ್ಲ ಮನಿಯಾಗ

ಹೀಗೆ ಅವನಿಗೆ ಅವನ ಕ್ಷೇಮದ ಬಗ್ಗೆ ಎಚ್ಚರಿಕೆ ಹೇಳುತ್ತಾಳೆ. ಇದೆಲ್ಲ ಹರೆಯದ ಹದಿನಾರರ ಹೆಣ್ಣು-ಗಂಡು ಗಳ 'ಮಡ್ಡು' ಹರೆಯದ ಪ್ರಣಯದ ಚಿತ್ರಣ. ಇಲ್ಲಿ ಅವರ ಪ್ರೇಮ ಸಹಜವಾದುದು. ಸುಂದರವಾದುದು. ಇದು ಪ್ರಣಯ ದಲ್ಲಿಯ ಪ್ರೀತಿ. ಒಂದರ್ಥದಲ್ಲಿ ಮದುವೆಯಾಗಲಿರುವ ಗಂಡು-ಹೆಣ್ಣು ಬಯಸುವ (ಬಯಸಿದ) ಪ್ರೀತಿ. ಇಲ್ಲಿ ಇನ್ನೂ ಒಗರು, ಚಿಗುರು, ಇದೆ. ಇದು ದಾಂಪತ್ಯದಲ್ಲಿ ಮಾತ್ರ ಮಾಧುರ್ಯವಾಗುತ್ತದೆ. ಅಲ್ಲಿ ಪ್ರೇಮಕ್ಕೆ ಅಂಜಿಕೆಯಿಲ್ಲ.

ದಾಂಪತ್ಯದಲ್ಲಿ ಪ್ರೀತಿ :

ಮದುವೆ ಒಂದು ಪವಿತ್ರ ಕಾರ್ಯ. ಆದ್ದರಿಂದ ನಮ್ಮ ಜನ 'ನೂರು ಸುಳ್ಳು ಹೇಳಿ ಒಂದು ಲಗ್ನ ಮಾಡು' ಎಂಬ ಗಾದೆಯನ್ನು ಬಳಸುತ್ತಾರೆ. ಗಂಡು-ಹೆಣ್ಣುಗಳ ಜೀವನದ ಒಂದು ಪರ್ವಕಾಲ, ಈ ಮದುವೆ.

"ಗಂಡು-ಹೆಣ್ಣುಗಳು ತಮ್ಮ ಜೀವನದ ಅರಿಕೆಯನ್ನು ಪರಸ್ಪರ ತುಂಬಿಕೊಳ್ಳುವದಕ್ಕಾಗಿ ಸಮಾಜ ಕೈಕೊಂಡ ಒಂದು ಪವಿತ್ರ ವ್ಯವಸ್ಥೆ ಈ ಮದುವೆ.* ಹೆಣ್ಣು ಹುಟ್ಟಿತೆಂದರೆ, ತಂದೆ-ತಾಯಿಗಳಿಗೆ ಒಂದು ಹುಣ್ಣು ಹುಟ್ಟಿದಂತೆ ಅನುರೂಪವಾದ ವರನನ್ನು ಹುಡುಕಿ ಲಗ್ನಮಾಡಿ ಕೊಡುವದು ಹಿರಿಯರ ಕರ್ತವ್ಯ. ಈ ಮಾತು. ಗಂಡಿಗೂ ಅನ್ವಯಿಸುತ್ತದೆ. ಇಲ್ಲಿಯ ಮದುವೆಗೆ ಗಂಡು-ಹೆಣ್ಣಿನಕ್ಕಿಂತ ಅವರ ತಂದೆ ತಾಯಿಗಳೇ ಹೆಚ್ಚು ಸಂಬಂಧ ಪಟ್ಟವರು. ಕನ್ಯೆಯನ್ನು ಕೊಡುವಾಗ ಹಣವನ್ನು ಸಿರಿತನವನ್ನು ನೋಡುತ್ತಾರೇನೋ ನಿಜ. ಆದರೆ ಅದೇ ಮುಖ್ಯವೆಂದು ಬಗೆದವರಲ್ಲ. ಈ ಕೆಳಗಿನ ಪದ್ಯ ಅದಕ್ಕೆ ಸಾಕ್ಷಿ.

> ವರಗೇಡಿ ವಗೆತನಕ ಕುಡಬ್ಯಾಡ ಹಡದವ್ವ
> ವರನೋಡ ವರನ ಗುಣ ನೋಡ । ಮನಿಯಾನ
> ಸಾಸ್ವಿ ಕಾಳಷ್ಟು ರಿಣ ನೋಡ.

ವರ ಒಳ್ಳೆಯವನಿದ್ದರೆ ಕನ್ಯೆಯನ್ನು ಕೊಡುತ್ತಾರೆ. ಮದುವೆಯಾದ ಹೊಸತರಲ್ಲಿ ಅವಳು ಗಂಡನ ಮನೆಗೆ ಕಾಲಿರಿ

* ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೪೬೪.

ಸುತ್ತಾಳೆ. ಕೆಲಸ ಬೊಗಸೆಗಳಲ್ಲಿ ಮತ್ತು ಊಟ ಉಪಚಾರಗಳಲ್ಲಿ ಈ ಮನೆಗೆ ಹೊಂದಿಕೊಳ್ಳುತ್ತಾಳೆ. ಬರಬರುತ್ತ ತನ್ನ ಬಳಗ ಮರೆತು ಅಂದು; ಅಪರಿಚಿತ ವ್ಯಕ್ತಿಯೊಂದಿಗೆ ಇಂದು ಒಂದಾಗಿ ಬಾಳುತ್ತಾಳೆ. ಅಲ್ಲದೆ ಅವನೇ ಸರ್ವಸ್ವವೆಂದು ಬಗೆಯುವಳು

ಸರದಾರ ನಿಮ್ಮಿಂದ ಸರುವೆಲ್ಲ ಮರತೇನ
ಸರದಾಗ ಇರುವ ಗುಳದಾಳಿ । ನಿಮ್ಮಿಂದ
ಸರುವ ಬಳಗೆಲ್ಲ ಮರತೇನ ।

ಇವಳಿಗೆ ಮಾಂಗಲ್ಯವೇ ಭಾಗ್ಯ. ಗಂಡ ಸರದಾರ. ಅವನಿಂದ ಎಲ್ಲವನ್ನೂ ಮರೆಯುತ್ತಾಳೆ. ಗಂಡ ಅವಳ ಕೊರಳ ತಾಳಿ ; ಕುಂಕುಮ. ಅಲ್ಲದೆ ಗಂಡನನ್ನು ಅಭಿಮಾನ ದಿಂದ ರಾಯ, ರಾಜ, ಅರಸ, ಪಂಡಿತ ಎಂದು ಸಂಬೋಧಿ ಸುತ್ತಾಳೆ. ಅವನೂ ಸಹಿತ ಅವಳಿಗೆ ರಾಣಿ, ಅರಸಿ, ಎಂದು ಕರೆದಿದ್ದಾನೆ. ತನ್ನವಳು ಕಾಮುಕಸ್ತೂರಿಯೆಂದು ಹೆಮ್ಮೆ ಪಟ್ಟು ಕೊಂಡಿದ್ದಾನೆ.

ಕಾಮುಕಸ್ತೂರಿ ನಿನ್ನ ಕಾಣದೆ ಇರಲಾರೆ.
ಮಲ್ಲೀಗಿ ಮಾಯು ಮರಿಲಾರೆ। ಕ್ಯಾದಿಗಿ
ಗರಿಯ ನಿನ್ನನಗಲಿ ಇರಲಾರೆ.

ಅವಳಿಂದ ಅಗಲಿ ಇರಲು ಆಗದೆಂದು ಉಸುರಿದ್ದಾನೆ. ಕಾಮುಕಸ್ತೂರಿ, ಮಲ್ಲಿಗೆ, ಕ್ಯಾದಗಿ ಇವೆಲ್ಲ ಪರಿಮಳ ಯುಕ್ತ ವಾದ, ನಾಜೂಕಾದ ಮನಸ್ಸನ್ನು ಸೆಳೆಯುವ ಉತ್ತಮ ವಸ್ತುಗಳು. ರಸಿಕರಿಗೆ ಇವುಗಳನ್ನು ಬಿಟ್ಟು ಇರಲಾಗದು.

ಅದಕ್ಕಾಗಿ ಇವನಿಗೂ ಕ್ಯಾದಿಗಿ ಗರಿಯಂತಹ ತನ್ನ ಹೆಂಡತಿ
ಯನ್ನು ಬಿಟ್ಟಿರಲಾಗುವದಿಲ್ಲ. ಇದು ಗಂಡನಿಗಾದ ಅನುಭವ
ವಾದರೆ ಹೆಂಡತಿಗೆ ಹೀಗಾಗುತ್ತದೆ.

ಕಾಣದೆ ಇರಲಾರೆ ಕನ್ನಡಿ ಮುಖದವರ
ಕಾಮನಿಗಿಂತ ಚಲುವರ । ಚೆನ್ನಿಗರ
ಕಾಣದರಗಳಿಗೆ ಇರಲಾರೆ

ಮುಖ ಕನ್ನಡಿ, ರೂಪು ಕಾಮನದು. ಇಂತವನೊಂದಿಗೆ
ಮಾತನಾಡಿದರೆ ಮತ್ತೂ ಸಮಾಧಾನ.

ಎಲ್ಲೆಲ್ಲಿ ನೋಡಿದರ ನಲ್ಲನಂಥವರಿಲ್ಲ
ಹಲ್ಲು ನೋಡಿದರ ಹವಳಾವು । ನಲ್ಲನ
ಸೊಲ್ಲು ಕೇಳಿದರ ಸಮಾಧಾನ

ಸುಂದರವಾದ ಮುಖ, ಹವಳದಂತಹ ಹಲ್ಲು, ಬಿರಿ
ತುಟಿ, ಇಂತವನ ಬಾಯಿಂದ ಬರುವ ಮಾತು, ಇವು ಯಾ
ಮನ ಸೆಳೆಯಲಿಕ್ಕಿಲ್ಲ. ಅದಕ್ಕಂತಲೇ ಇವಳಿಗೆ ಸಮಾಧಾ
ವೆನಿಸಿದೆ. ಅಂತಹ ಆತ್ಮೀಯತೆಯ ಮಾತುಗಳು ಅವು. ಮ
ದೆರೆದು ಮಾತನಾಡಿದ ; ಲಿಂಗಮೆಚ್ಚಿ ಅಹುದೆಂದ ಮು
ಕಗಳು. ಹೊಸದಾಗಿ ಬಂದ ಹೆಣ್ಣಿಗೆ ತನ್ನ ತವರು ನೆನ
ಗುವದು ಸಹಜ ಆದರೂ ತವರನ್ನು ಮರೆಯುವಂತೆ ಮಾ
ದ್ದಾನೆ ಆವಳ ಗಂಡ ಇದರಿಂದ ಗಂಡಿನ ಬಾಳು ಸ್ವರ್ಗದ ಬಾ
ಗುತ್ತದೆ. ಮುಖ ಸಣ್ಣದು ಮಾಡಿಕೊಂಡು ಮುದ್ದೆಯಾ
ತನ್ನ ಹೆಂಡತಿಗೆ ಪತಿಯೇ ದೈವ ; ನನ್ನನ್ನು ನೋಡಿ ಕ

ಕಳೆಯೆಂದು ಹೇಳುವ ಆದರ್ಶ, ಜೀವನದ ಯಾವ ಮೌಲ್ಯಕ್ಕೂ ಕಡಿಮೆಯಿಲ್ಲ. ಆದಕ್ಕೆ ಹೀಗೆ ಹೇಳಿದ್ದಾನೆ.

ಹಾಸಿಗಿ ಹಾಸೆಂದ ಮಲ್ಲಿಗಿ ಮುಡಿಯೆಂದ
ಬೇಸತ್ತರ ಮಡದಿ ಮಲಗೆಂದ । ನನರಾಯ
ತನ್ನ ನೋಡಿ ತವರ ಮರೆಯೆಂದ ॥

ಹೆಣ್ಣಿನ ಬಾಳಿನ ಪರಿಪೂರ್ಣತೆಯೇ ಈ ಪದ್ಯ. ಹಾಸಿಗಿ ಹಾಸಿ ಮಲ್ಲಿಗೆಯನ್ನು ಮುಡಿದು ಸಂತೋಷದಿಂದ ಕಾಲಕಳೆ. ಬೇಸರಿಕೆ ಬಂದರೆ ವಿಶ್ರಾಂತಿಯನ್ನು ತೆಗೆದುಕೊ, ಅಷ್ಟೇ ಏಕೆ; ನನ್ನನ್ನು ನೋಡಿ ನಿನ್ನ ತವರನ್ನೇ ಮರೆ ಎಂದು ಹೇಳುವಲ್ಲಿ ಹೆಣ್ಣಿನ ಸರ್ವಸ್ವವಾಗಿ ಆ ಪುರುಷನು ನಿಲ್ಲುವನು. ತವರ ಮನೆಯಲ್ಲಿ ಅವಳಿಗೆ ಸಿಗುವ ಪ್ರೀತಿಯನ್ನು ವಿಶ್ರಾಂತಿಯನ್ನು ಗಂಡನ ಮನೆಯಲ್ಲಿಯೂ ಸಿಗುವಂತಹ ವ್ಯವಸ್ಥೆಯನ್ನು ಮಾಡಿ ಕೊಡುತ್ತಾನೆ.

ತಿಂಗಳಿನ ಮಧುರ ರಾತ್ರಿ. ಬೆಳದಿಂಗಳು ಹಿಟ್ಟು ಚೆಲ್ಲಿದಂತೆ ಬಿದ್ದಿದೆ. ಪುಷ್ಪಗಳ ಲೋಕದಿಂದ ತಂಗಾಳಿ ಬರುತ್ತಿದೆ. ಹೆಂಡತಿ ಹಾಸಿಗೆ ಹಾಸಿದ್ದಾಳೆ. ತಾನು ಆ ಹಾಸಿಗೆಗೆ ಬಂದು ಹೆಂಡತಿಯ ಕೈಯನ್ನು ಹಿಡಿದು ಪ್ರೀತಿಯಿಂದ ಹಿಚುಕಿದಾಗ–

ಹಚ್ಚಿಬಟ್ಟಿನ ಕೈ ಒತ್ತಿ ಹಿಡಿಯಲಿ ಬ್ಯಾಡ
ನೆತ್ತರಿಳಿದಾವ ಬಟ್ಟಿಗಿ। ನನರಾಯ

ಅತ್ತೆವ್ವ ಬೇದಾಳು ಕೈಯ ಬಿಡ.

ಎಂದು ಹೇಳುತ್ತಾಳೆ. ಗಂಡ ಹಾಗೆ ಕೈ ಹಿಡಿದು ಹಿಚುಕುತ್ತಿರುವಾಗ ನೋವಾದರೂ ಒಂದು ವಿಧದ ಆನಂದ ಅವಳಿಗಾಗಿರಬೇಕು. ಇದಕ್ಕೆ ಅವಳಿಗೆ ಖೇದವಿಲ್ಲ. ಆದರೆ ತಾನು ಸೊಸೆ, ಅತ್ತೆಯ ಕೈಯಲ್ಲಿ ಮುಂಜಾನೆ ಕೆಲಸ ಮಾಡಬೇಕು. ತನ್ನ ಕೂದಲು ಕೊಂಕದಂತೆ ನೋಡಿಕೊಳ್ಳುವ ಅತ್ತೆ; ಬೆರಳಿಗೆ ನೆತ್ತರಿಳಿವಂತೆ ಗಂಡ ಹಿಚುಕಿದ ಕೈಯನ್ನು ನೋಡಿದರೆ ಸುಮ್ಮನಿದ್ದಾಳೆಯೆ ? ಅದಕ್ಕಾಗಿಯೇ ದಮ್ಮಯ್ಯ, ನನರಾಜ, ಅರಸ ಕೈಬಿಡು ಎಂದು ವಿನಂತಿಸಿಕೊಂಡು ಕೈ ಬಿಡಿಸಿಕೊಂಡಿರಬೇಕು. ಇಲ್ಲಿ ಅತ್ತೆ, ಸೊಸೆಯ ಮೇಲಿಟ್ಟ ಪ್ರೀತಿ, ಗಂಡ-ಹೆಂಡತಿಯರ ಪ್ರೀತಿ, ಎಷ್ಟು ಸಹಜ ಸುಂದರವಾಗಿ ಮೂಡಿ ಬಂದಿದೆ ಎಂಬುದನ್ನು ನೋಡಬಹುದು. ಜೀವನದಲ್ಲಿ ಸಾಧಿಸುವುದಾದರೂ ಏನಿದೆ ? ಬಹುಶಃ ಇಂತಹ ಪ್ರೀತಿಯನ್ನು ಕಂಡುಕೊಂಡೊ ಏನೋ ಸರ್ವಜ್ಞ ಸ್ವರ್ಗಕ್ಕೆ ಕಿಚ್ಚು ಹಚ್ಚಲು ಹೊರಟಿದ್ದಾನೆ. ಗಂಡ ನಂತರ ಅವಳ ಕೈಯನ್ನು ಬಿಟ್ಟು ತನ್ನ ಮನೋ ಭೂಮಿಕೆಯನ್ನು ಈಡೇರಿಸಿಕೊಳ್ಳುತ್ತಾನೆ* ಪ್ರೀತಿಯಿಂದ ಅಪ್ಪಿ, ಮುತ್ತಿ ಆನಂದ ಪಡುತ್ತಾನೆ. ಪುರುಷಾರ್ಥಗಳಲ್ಲಿ ಒಂದಾದ ಕಾಮವನ್ನು ತೃಪ್ತಿಪಡಿಸಿಕೊಳ್ಳುತ್ತಾನೆ. ಹೀಗೆ ಸೊಗಸಾದ ದಾಂಪತ್ಯ ಜೀವನ ನಡೆಯಿಸಿ ಸುಖೀ ಜೀವನ ಸಾಗಿಸುತ್ತಾರೆ. ಹೆಂಡತಿಗೆ

---

* ಬೆರಸಿ ಇಟೀನ ಬೆಲ್ಲಸೆನಗಡೆಲಿ. ಪುಟ ೫೧.

ಸಂ. ಜ್ಯೋತಿ ಹೊಸೂರ. ಪದ್ಯ ೬

ತವರು ಮನೆಗೆ ಹೋಗುವ ಬಯಕೆ ಆದಾಗ ಗಂಡನಿಗೆ ಯಾವ ವೇಳೆಯಲ್ಲಿ ಹೇಗೆ ಕೇಳಬೇಕೆಂಬುದನ್ನರಿತು ಇನಿ ಮಾತಿನಿಂದ ನಾಚಿ ಕೇಳುವ ರೀತಿಯಲ್ಲಿ ಪ್ರೀತಿ ಕಳೆ ಕಟ್ಟಿದೆ.

ಕಂದೀಲ ಬೆಳಕೀಲಿ ಗಂಡಗೂಟಿಕ ನೀಡಿ
ದಾಳಿಂಬರಿ ಸೆರಗ ಮರೆಮಾಡಿ| ಕೇಳ್ಯಾಳು
ಹೋಗಿ ಬರತೀನಿ ತವರೀಗೆ

ಎಂತಹ ಸಂಸ್ಕೃತಿ ನೋಡಿ. ಮಂದ ಪ್ರಕಾಶದಲ್ಲಿ ಮುಗುಳು ನಗೆ ನಗುತ್ತ ದಾಳಿಂಬರ ಬಣ್ಣದ ತನ್ನ ಸೀರೆ ಸೆರಗು ಮರೆಮಾಡಿ ದಾಳಿಂಬರ ಬೀಜದಂತಹ ಹಲ್ಲಿನವಳು ನಾಚಿ ಮುಖ ಓರೆಮಾಡಿ ತವರಿಗೆ ಹೋಗಿ ಬರತೀನಿ ಎಂದು ಕೇಳು ಲ್ಲಿ ಅವಳ ಪದ್ಧತಿ ಹಾಗೂ ಗಂಡನ ಅನುಮತಿಯನ್ನು ಡೆಯುವ ಆದರ್ಶ ಇಲ್ಲಿ ಮೈವೆತ್ತು ನಿಂತಿದೆ. ಆಗ ಗಂಡನು ಾಲ್ಕು ಗುಳ್ಳವ್ವ ಆಗಲಿ ನಿಮ್ಮಣ್ಣ ಕರೆಯಲು ಬರಲಿ ಆಗ ನ್ನನ್ನು ಮೇಣೆಯೊಳಗೆ ಕಳಿಸುತ್ತೇವೆಂದು ಹೇಳುವಲ್ಲಿ ಂಡನು ಹೆಂಡತಿಯ ಮೇಲಿನ ಪ್ರೀತಿಯನ್ನು ತೋರಿಸಿ ೊಟ್ಟಿದ್ದಾನೆ.

ಕೆಲವು ದಿನ ಗತಿಸಿದ ಮೇಲೆ ಅವಳಣ್ಣ ಕರೆಯಲು ಂದಾಗ ಗಂಡನನ್ನು ಬಿಟ್ಟು ಹೋಗುವ ಮನಸ್ಸೇ ಅವಳಿಗೆ ರುವುದಿಲ್ಲ. ಗಂಡ-ಹೆಂಡಿರ ಸರಸ ಜೀವನ ನೆನೆಸಿಕೊಂಡು ೇಗನ್ನುತ್ತಾಳೆ.

ಹಚ್ಚಡದ ಪದರಾಗ ಅಚ್ಚಮಲ್ಲಿಗೆಯ ಹೂವ
ಬಿಚ್ಚಿ ನನಮ್ಯಾಲ ಒಗೆವಂಥ| ರಾಯರನ

ಬಿಟ್ಯಾಂಗ ಬರಲೆ ಹಡೆದವ್ವ

ಹಚ್ಚಡದ ಪದರಿನ ಮೇಲೆ ಶ್ರೇಷ್ಠ ಮಲ್ಲಿಗೆಯಹೂವನ್ನು ಬಿಚ್ಚಿ ನನಮೇಲೆ ಎಸೆಯುವ ಸಂತೋಷದ ಮಾತುಗಳನ್ನು ಹೇಳುವ ನನ್ನ ರಾಜನನ್ನು ಬಿಟ್ಟು ಹ್ಯಾಂಗಿರೆ ಬರಲೆಂದು ಅನ್ನುವಳು. ಇತ್ತ ಹೆಂಡತಿ ತವರ ಮನೆಗೆ ಹೋದರೆ ಗಂಡನಿಗಾದರೂ ಏನು ನೆಮ್ಮದಿಯೆ ? ಸತಿಯಂತೆ ಪತಿ ಅವ ನಿಗೂ ತೃಪ್ತಿಯಿಲ್ಲ. ಬೇಸರದಿಂದ ಖಿನ್ನಮುಖ ಮಾಡಿ ಕೊಂಡು ತಾಯಿಗೆ ಹೀಗನ್ನುತ್ತಾನೆ.

ಅಡಗೀಯು ಮನಿಯ್ಯಾಗ ಮಡದೀಯು ಸುಳಿವಿಲ್ಲ
ಅಡಗಿ ಬಾಯಿಗೆ ರುಚಿಯಿಲ್ಲ। ಹಡೆದವ್ವ
ಮಡದಿ ತವರೀಗೆ ಹೋಗ್ಯಾಳ.

ಈಗ ಹೆಂಡತಿ ಕೈಯ ಅಡಿಗೆಯು ರುಚಿಯೆನಿಸಿ ಅವ ಳಿಲ್ಲದಾಗ ತಾಯಿಯ ಅಡಿಗೆ ರುಚಿಯೆನಿಸುವುದಿಲ್ಲ. ಅವಳು ತವರಿನಿಂದ ಎಂದು ಬಂದಾಳೆಂದು ಒಂದೇ ಸಮನೆ ದಾರಿ ಕಾಯು ತ್ತಾನೆ.ಅವಳು ಕೆಲವು ದಿನಗಳ ವರೆಗೆ ತವರಲ್ಲಿ ನಿಂತು ತನ್ನ ಗಂಡನ ಬಗ್ಗೆ ಅಭಿಮಾನದ ಮಾತುಗಳನ್ನು ತಂದೆ ತಾಯಿಯ ಮುಂದೆ ಅಣ್ಣ-ತಮ್ಮಂದಿರ ಮುಂದೆ ಗೆಳತಿಯರ ಮುಂದೆ ಹೇಳುತ್ತಾಳೆ. ಕೆಲವು ದಿನಗಳಾದ ನಂತರ ತಿರುಗಿ ಗಂಡನ ಮನೆಗೆ ಬಂದಾಗ ಗಂಡನ ಬಗ್ಗೆ ಕೆಲವು ಹೆಣ್ಣು ಮಕ್ಕಳು ದೂರು ಹೇಳುವರು. ಅವರಲ್ಲಿ ಒಬ್ಬಳು—

ಚಿಂತಾಕು ಇಟಕೊಂಡು ಚಿಪ್ಪಾಡಿ ಬಳಿವಾಕೆ
ಚಿಂತಿಲ್ಲ ಏನ ನಿನಗಿಷ್ಟು। ನಿನಗಂಡ
ಅಲ್ಲೊಬ್ಬಳ ಕೂಡ ನಗತಿದ್ದ.

ಎಂದು ಚಾಡಿ ಹೇಳಿದಾಗ ಅವಳಿಗೆ ಹೇಗಾಗಿರಬೇಡ ? ಂತಹ ಸೊಗಸಾದ ಸಂಸಾರ ಸಾಗಿಸಿಕೊಂಡು ಬಂದಿರುವ ನಗಂಡ ಹೀಗೆ ದಾರಿ ಬಿಡುವುದೆ ? ಎಂದೆಲ್ಲ ಚಿಂತಿಸುತ್ತಾಳೆ ಂಡನ ಬಗ್ಗೆ ಸಿಟ್ಟು ಬಂದರೂ ಅದನ್ನು ಮನದಲ್ಲಿ ಅದುಮಿಟ್ಟು ೊಂಡು ಅಂತಹ ಚಾಡಿ ಹೇಳಿದ ಹೆಣ್ಣಿಗೆ ಸರಿಯಾದ ಉತ್ತರ ನ್ನೇ ಕೊಡುತ್ತಾಳೆ.

"ನಕ್ಕರ ನಗಲೆವ್ವ ನಗಿಮುಖದ ಕ್ಯಾದಿಗಿ
ನಾ ಮುಚ್ಚಿ ಮುಡಿವ ಪರಿಮಳದ। ಆ ಹೂವ
ಅವಳೊಂದು ಗಳಿಗಿ ಮುಡಿಯಲಿ ॥

ಂದು ಹೇಳಿ ನನಗಂಡ ನಕ್ಕರೆ ನಿನಗೇನು ಬಂತ ಕೇಡು ? ನಗೇಕೆ ಅಸೂಯೆ ? ನಾನು ಮುಚ್ಚಿ ಮುಡಿಯುವ ರಿಮಳದ ಹೂವನ್ನು ಅವಳೊಂದು ಗಳಿಗೆ ಮುಡಿಯಲಿ' ಂದು ಹೇಳುವಲ್ಲಿ ಅವಳ ಜಾಣತನ ಅವಳ ಒಳ್ಳೆಯ ವಿಚಾರ, ಹನೆ. ಇದು ಆ ಸ್ತ್ರೀಯ ಸಂಸ್ಕೃತಿಯ ಸಾಕ್ಷಿ. ಚಾಡಿ ಹೇಳಿದ ಹೆಣ್ಣಿನ ಮಾತನ್ನು ಅಷ್ಟಕ್ಕೆ ಬಿಡುವದಿಲ್ಲ ಅವಳು. ಇನ್ನು ುಂದೆ ಗಂಡನಿಂದ ಇಂತಹ ಪ್ರಮಾದವಾಗಬಾರದೆಂದು ಚ್ಚರಿಕೆವಹಿಸುವಳು. ಹೊರಗಿನಿಂದ ಬಂದ ಗಂಡನನ್ನು ಹೀಗೆ ೇಳುತ್ತಾಳೆ.

"ಎಲ್ಲಿ ಹೋಗಿದ್ದಿರಾಯ ಸೆಲ್ಯಾಕ ಮಾಸೇದ
ಅಲ್ಲೊಬ್ಬಳ ಕೂಡ ಸಲಗೀಯ! ನೀವ್ ಮಾಡಿ
ಇಲ್ಲೆಂಬುದೇನ ನನಮುಂದ."

ಎಂದು ಗಂಡನಿಗೆ ಕೇಳಿ ಸತ್ಯ ಮಾತನಾಡುವಂತೆ ತ್ತಾಯಪಡಿಸುವಳು. ನೀವು ಎಲ್ಲಿ ಹೋಗಿದ್ದಿರಿ. ನಿಮ್ಮ

ಬಟ್ಟೆ ಹೊಲಸಾಗಲು ಕಾರಣವೇನು ? ಆ ಹೆಣ್ಣಿನೊಂದಿಗೆ ಸಲುಗಿ ಒಳ್ಳೆಯದಲ್ಲ. ಇದನ್ನು ಬಿಟ್ಟುಬಿಡಿ ಎಂದು ಬೇಡಿ ಕೊಳ್ಳುತ್ತಾಳೆ. ಆದೇ ಸತಿ ಹೀಗೆ ಪರ ಪುರುಷನ ಸಂಗಮಾಡಿ ದರೆ ಅವಳು ಗಯ್ಯಾಳಿ, ಇದೆಲ್ಲಿಯ ಮಾತು ? ಆದರೂ ಇಲ್ಲಿಯ ಸ್ತ್ರೀ ಮುನಿದು ಮಾರಿಯಾಗುವದಿಲ್ಲ. ಕಾಂತಾ ಸಮ್ಮಿತವಾಗಿ ಮೃದುವಾಗಿ ಮೆಲುವಾಗಿ ಅದನ್ನೇ ಪರ್ಯಾಯ ವಾಗಿ ಹೀಗೆ ಹೇಳುವಳು.

"ಅಂಗೀ ಮ್ಯಾಲಂಗಿ ಚಂದೇನ ನನರಾಯ
ರಂಬಿ ಮ್ಯಾಲ ರಂಬಿ ಪ್ರತಿರಂಬಿ । ಇದ್ದರ
ಚಂದೇನ ನಮ್ಮ ಮನಿಯಾಗ."

ತಪ್ಪಿ ನಡೆಯುವ ಗಂಡನನ್ನು ದಾರಿಗೆ ತರಲು ಹೆಣಗುವ ಹೆಣ್ಣಿನ ಈ ರೀತಿ ತುಂಬ ಯೋಗ್ಯವಾದುದು. ಅವನ ಮನಸ್ಸನ್ನು ಪ್ರೀತಿಯಿಂದ ಗೆಲ್ಲುವದು ಸಾಮಾನ್ಯ ಮಾತೆ ? ಇದು ತುಂಬ ಕಠಿಣವಾದುದು. ಅಂತಹದನ್ನು ಇವಳು ಸಾಧಿಸಿ ದ್ದಾಳೆ. ತಾನು ರಂಬಿ, ಸಾಕಷ್ಟು ಸುಂದರಿ. ತನ್ನ ಮೇಲೆ ಇನ್ನೊಬ್ಬಳನ್ನು ಇಡುವದಾಗಲಿ, ತರುವುದಾಗಲಿ ಒಳ್ಳೆಯದಲ್ಲ. ರಂಬಿಯ ಮೇಲೆ ಮತ್ತೊಬ್ಬಳು ಬರುವವಳು ಪ್ರತಿರಂಬಿ. ಅವಳು ಅಷ್ಟೊಂದು ಸುಂದರಿಯಲ್ಲದಿದ್ದರೂ ಆವಳ ಮೇಲೆ ಈತ ಪ್ರೀತಿಸುವದಾದರೆ ನಿಜವಾಗಿ ತನ್ನ ಹೆಂಡತಿ ಊರಿಗೆ ಹೋದಾಗ ಅವಳನ್ನು ಮೋಹಿಸಿರಬೇಕು. ಗಿಡಗಳಿಲ್ಲದ ಊರಲ್ಲಿ ಔಡಲವೇ ಮರವಾದಂತೆ ಕುರುಡರಲ್ಲಿ ಮೆಳ್ಳ ಶ್ರೇಷ್ಠನಾದಂತೆ ಪ್ರತಿ ರಂಬಿಯನ್ನು ನೋಡಿರಬೇಕು. ಇಲ್ಲಿಯ ಹೆಣ್ಣು

ುಗಳು ಗಂಡನ ಬಗ್ಗೆ ಕಾಳಜಿವಹಿಸಿ, ತನ್ನ ಸುಂದರ ಮಾತು ಳಿಂದ ಗಂಡನು ತನ್ನ ಮನ ಮೆಚ್ಚುವಂತೆ ಮಾಡುವಳು. ಂಡನ ಪ್ರೀತಿಗೆ ಪಾತ್ರಳಾಗುತ್ತಾಳೆ. ಎಷ್ಟಾದರೂ 'ಗಂಡ- ಂಡಿರ ಜಗಳ ಗಂಧ ತೀಡಿದ್ಹಾಂಗ.' ಹೆಂಡತಿಯ ಸರಳ ಜ್ಜನಿಕೆಯ ವರ್ತನೆಗೆ ಗಂಡ ತಲೆದೂಗಿ ಸಂತೋಷದಿಂದ ಾಲಕಳೆಯುತ್ತಾರೆ. ಪ್ರೀತಿಯೇ ಇವರಿಗೆ ದೇವರು.

ಾಯಿ-ಮಕ್ಕಳಲ್ಲಿ ಪ್ರೀತಿ :

'ಅಪುತ್ರಸ್ಯ ಗತಿರ್ನಾಸ್ತಿ' ಎಂಬಂತೆ ಮಕ್ಕಳಿರದಿದ್ದರೆ ್ವರ್ಗಸಿಗದೆಂಬ ನಂಬಿಕೆ ನಮ್ಮ ಜನರಲ್ಲಿದೆ. ಅವರಿಗೆ ಮಕ್ಕಳೇ ಾಗ್ಯ. ಗಂಡ-ಹೆಂಡಿರ ದಾಂಪತ್ಯದ ಒಂದು ಒಳ್ಳೆಯ ಪ್ರತೀಕ ುಗು. ಹೆಣ್ಣಿರಲಿ ಗಂಡಿರಲಿ ಮಗು ಬೇಕೆಂದು ಬಯಸುತ್ತಾರೆ. ಶೇಷವಾಗಿ ಗಂಡು ಮಗುವಿಗೆ ಬೆಲೆ ಕೊಡುತ್ತಾರೆ. ಹುಟ್ಟಿದ ಗುವಿನ ಮೇಲೆ ತಾಯಿ-ತಂದೆಗಳ ಮಮತೆ ಹೆಚ್ಚು. ಬಾಲ ನ್ನು ಹಡೆಯುವಾಗ ಬಾಡಿದ ಮುಖ, ಮುಂದೆ ಬಾಲ ಂಡಾಡಿ ಬಂದಾಗ ಅವನನ್ನು ನೋಡಿ ಕುಂದಣದ ಚಿನ್ನದಂತೆ ೊಳೆಯುತ್ತದೆ. ಆ ಮಗುವನ್ನು ಜೋಗುಳ ಲಾಲಿ ಹಾಡಿ ಲಗಿಸುವದು; ಮಲಗಿದ ಮಗುವನ್ನು ಕಂಡು ಆನಂದ ಪಡು ದು, ಅವಳ ಕಾಯಕವಾಗುವದು.

ತೊಟ್ಟಿಲದಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮ್ಯಾಲಾಗಿ ಮಲಗ್ಯಾನ । ಕಂದೈಗ
ಮುತ್ತಿನ ದೃಷ್ಟಿ ತಗದೇನ.

ಎಂದು ಹೇಳುವಲ್ಲಿ ಅವಳ ವಾತ್ಸಲ್ಯ ಕೋಡಿಯಾಗಿ

ಹರಿಯುತ್ತದೆ. ತನ್ನ ಮಗು ಮುತ್ತು, ಬಂಗಾರ. ಅದು ಮಲಗಿದ ನೈಜ ಸುಂದರ ಸ್ಥಿತಿ ಅವಳಿಗೆ ಇನ್ನಷ್ಟು ಆನಂದ ಕೊಟ್ಟಿದೆ. ತನಗೇ ಹೀಗಾದಾಗ ಇನ್ನೊಬ್ಬರಿಂದ ದೃಷ್ಟಿ ತಾಗದೇ ಇದ್ದೀತೆ? ಆದ್ದರಿಂದ ಅವಳು ದೃಷ್ಟಿ ತಗೆಯುತ್ತಾಳೆ. ಕೂಸು ಅತ್ತರೆ ಅವಳಿಗೆ ಬೇಸರವಿಲ್ಲ.

ಅತ್ತರ ಅಳಲೆವ್ವ ಈ ಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನೆಗೆಲಸ। ಕಂದನಂಥ
ಮಕ್ಕಳಿರಲೆವ್ವ ಮನೆತುಂಬ.

ಮನೆಗೆಲಸಕ್ಕಿಂತ ಮಗು ಮುಖ್ಯ. ಕೆಲಸ ಕೆಟ್ಟರೂ ಅವಳಿಗೆ ಚಿಂತೆಯಿಲ್ಲ. ಮಗು ಸುಖದಿಂದ ಇರಬೇಕು. ಅಳುವ ಕಂದನ ತುಟಿಯು ಹವಳದ ಕುಡಿಯಂತೆ. ಕಣ್ಣೋಟ ಶಿವನ ಕೈಅಲಗು ಹೊಳೆದಂತೆ ಎಂದು ಜೋಗುಳ ಹಾಡಿ ಮಗುವನ್ನು ಮಲಗಿಸುವಳು. ಇಲ್ಲಿ ತಾಯಿತನದ ಉದಾತ್ತ ಹಿರಿಮೆ ಮೂಡಿ ಬಂದಿದೆ. ಒಮ್ಮೆ ದಾಂಪತ್ಯದಲ್ಲಿ ಒಂದಾದ ಪ್ರೇಮ ಮಗುವಿನೊಂದಿಗೆ ವಾತ್ಸಲ್ಯವಾಗಿ ಗಂಡನೊಡನೆ ಇನ್ನೂ ಹೆಚ್ಚುತ್ತದೆ. ಕೂಸು ಇದ್ದ ಮನೆಗೆ ಬೀಸಣಿಕೆ ಬೇಕಿಲ್ಲ. ಕೂಸು ಒಳ ಹೊರಗೆ ಆಡಿದರೆ ಬೀಸಣಿಕೆಯ ಗಾಳಿ ಬೀಸಿದಂತಾಗುವದೆನ್ನುತ್ತಾಳೆ. ಆ ಮಗು ಆಡಿ ಬಂದರೆ ತೆಂಗಿನಕಾಯಿಯ ತಿಳಿನೀರನ್ನು ತೆಗೆದುಕೊಂಡು ಬಂಗಾರದಂತಹ ಆ ಮಗುವಿನ ಮೋರೆಯನ್ನು ತೊಳೆಯುತ್ತಾಳೆ. ತಂದೆ-ತಾಯಿ-ಬಂಧು ಬಳಗಕ್ಕಿಂತ ಗಂಡ ಶ್ರೇಷ್ಠ. ಅವನಿಗೂ ಶ್ರೇಷ್ಠ 'ಮಾಣಿಕ್ಯದ ಹರಳದಂತಹ' ಮಗ. ಹೀಗೆ ತನ್ನ ಮಾಣಿಕ್ಯದ ಹರಳಕ್ಕೆ ವಾತ್ಸಲ್ಯವನ್ನು

ುರಿದು ಅವನನ್ನು ದೊಡವನನ್ನಾಗಿ ಮಾಡುವಳು. ಅವನು ಲಿತು ಜ್ಞಾಣನಾಗಬೇಕೆಂಬ ಬಯಕೆ ಅವಳಿಗಿದೆ ಅದಕ್ಕಾಗಿ ಲ್ಲಾದರೂ ಇರಲಿ, ಬೆಳೆಯಲೆಂದು ಬಯಸುವಳು.

ಎಲ್ಲಾರೆ ಇರಲೆವ್ವ ಹುಲ್ಲಾಗಿ ಬೆಳೆಯಾಲಿ
ನೆಲ್ಲಿ ಬಡ್ಡ್ಯಾಗಿ ಜಿಗಿಯಲಿ| ಕಂದಯ್ಯ
ಜಯವಂತನಾಗಿ ಬೆಳೆಯಲಿ.

ಎಂದು ಎಲ್ಲಾದರೂ ಇರಲಿ ಕಂದ ಕೀರ್ತಿವಂತನಾಗಿರಲಿ ಂಬ ಹೆಬ್ಬಯಕೆ ಅವಳಲ್ಲಿದೆ. ಅವಳಿಗೆ ಮಗನೇ ಕೀರ್ತಿ ತಾಕೆ ಎಂಬ ನಂಬುಗೆಯಿದೆ. 'ಎಲ್ಲಾದರೂ ಇರು ಎಂತಾ ರೂ ಇರು ಎಂದೆಂದೂ ನೀ ಕನ್ನಡವಾಗಿರು' ಎಂದು ಕುವೆಂಪು ೀಳಿದ ಮಾತು ಇಲ್ಲಿ ನೆನಪಿಗೆ ಬರುತ್ತದೆ. ಮಕ್ಕಳಿಲ್ಲದವರ ತಿ ದೇವರೇ ಗತಿ. 'ಬಾಲಕರಿಲ್ಲದ ಬಾಲಿದ್ಯಾತರ ಜನ್ಮ' ಂದು ಒಮ್ಮೊಮ್ಮೆ ಹೆಣ್ಣು ನಿರಾಶಾವಾದಿಯಾಗುತ್ತಾಳೆ. ುಕ್ಕಳನ್ನು ಪಡೆದ ಹೆಣ್ಣು ಆಶಾವಾದಿಯಾಗುತ್ತಾಳೆ.

ಾಯ್ತಂದೆ; ಬಂಧು ಬಾಂಧವರಲ್ಲಿ; ಪ್ರೀತಿ:

ಇಲ್ಲಿಯ ಮಹಿಳೆಗೆ ತಂದೆ; ತಾಯಿ, ಅಕ್ಕ-ತಂಗಿ, ಅಣ್ಣ ಮ್ಮ, ನಾದಿನಿ-ನೇಗಣ್ಣಿ ಇವರೆಲ್ಲರಲ್ಲಿ ಪ್ರೀತಿಯಿದೆ. ಗಂಡನ ುನೆಯಲ್ಲಿದ್ದಾಗ ತವರು ಮನೆಯ ಸೊಗಸನ್ನು ಕುರಿತು ಂಡನ ಮನೆಯವರೆಲ್ಲರಿಗೂ ಅರುಹುವಳು. ತಂದೆ-ತಾಯಿ ರ ಮೇಲೆ ಅವಳಿಟ್ಟ ಪ್ರೀತಿ, ಆದರ ಅಪಾರ. ತನ್ನ ತಂಗಿ ಯದೇ ಜಗಳ ತಗೆದರೆ ಅವಳಿಗೆ ಬುದ್ಧಿ ಹೇಳುವ ರೀತಿ ಂತಹ ಸುಂದರ!

ಆಡಿನ ಮಲಿಯಂಗ ಜೋಡ ನಾವಿಬ್ಬರ
ಆಡಬ್ಯಾಡ ತಂಗಿ ಕದನವ । ಜಗಳಕ
ಜೋಡಿನ ಹಕ್ಕಿ ಅಗಲ್ಯಾವ.

ತವ್ಮಿಬ್ಬರ ಜೋಡಿ ಆಡಿನ ಮಲೆಯ ಜೋಡಿಯಂತೆ ಸಮಜೋಡಿ. ನಮ್ಮಿಬ್ಬರಲ್ಲಿ ಜಗಳ ಬೇಡವೆಂದು ಹೇಳಿ ಸಹಕರಿಸುವಳು. ನಿತ್ಯ ಬಳಕೆಯಲ್ಲಿರುವ ಹೋಲಿಕೆ ಕೊಟ್ಟು ಹೇಳುವ ಅವಳ ರೀತಿ ಸೊಗಸಾಗಿದೆ.

ಕೆಲವು ದಿನ ಗತಿಸಿದ ಮೇಲೆ; ದೊಡ್ಡವಳಾಗಿ ಗಂಡನ ಮನೆಗೆ ಹೋಗುವಾಗ ಆದಂತಹ ದುಃಖ ಪುನಃ ಅವಳಿಗೆ ತವರ ಮನೆಯಲ್ಲಿ ಪ್ರಥಮ ಹೆರಿಗೆಯಾದ ನಂತರ ಗಂಡನ ಮನೆಗೆ ಹೋಗುವಾಗ ಮರುಕಳಿಸುತ್ತದೆ.

ತೊಟ್ಟಿಲ ಹೊತ್ಕೊಂಡು ತೀರಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮಿ ಹೊಡಕೊಂಡು । ಬರುವಾಗ
ತಿಟ್ಹತ್ತಿ ತವರ ನೋಡ್ಯಾಳ.

ಮೊದಲ ಹೆರಿಗೆ ತವರಲ್ಲಿ ಆದನಂತರ ತವರನರು ಹೆಣ್ಣು ಮಗಳಿಗೆ 'ತೊಟ್ಟಿಲ-ಬಟ್ಟಲ' ಕೊಡುವ ಪದ್ಧತಿ ನಮ್ಮಲ್ಲಿ ಇದೆ. ಅಲ್ಲದೆ ಮಗಳ ಜೀವನ ಸುಗಮವಾಗಲು ಅವಳು ಮತ್ತೇನನ್ನಾದರೂ ಬೇಡಿದರೂ ಕೊಡಲು ತವರವರು ತಯ್ಯಾರು. ಈಕೆ ಅಪ್ಪ ಕೊಟ್ಟೆಮ್ಮಿ ಹೊಡಕೊಂಡು, ತೊಟ್ಟಿಲ ಹೊತ್ಕೊಂಡು ತವರವರು ಕೊಟ್ಟ ಸೀರೆ ಉಟ್ಟುಕೊಂಡು ಮಗುವನ್ನು ಕಂಕುಳದಲ್ಲಿ ಇಟ್ಟುಕೊಂಡು ಬರುವಾಗ ತವರನ್ನು ಎಷ್ಟು ನೋಡಿದರೂ ತೃಪ್ತಿಯಿಲ್ಲ. ಹಾಗೆ ಅಣ್ಣ ತಮ್ಮ ತಂದೆ

ತಾಯಿಂಗಳಿಗೂ ಅವಳನ್ನು ನೋಡಬೇಕೆಂಬ ಭಾವ. ತಂಗೀನ ಕಳಿಸಿದ ಅಣ್ಣನ ಸ್ಥಿತಿ ನೋಡಿ.

ತಂಗೀನ ಕಳುವ್ಯಾನ. ತೆವರೇರಿ ನಿಂತಾನ
ಅಂಗೀಲಿ ಸೀರು ವರಸ್ಯಾನ । ನನ್ನಣ್ಣ
ಇಂದೀಗಿ ತಂಗಿ ಎರವೆಂದ.

ಎಂತಹ ಹೃದಯ ಸ್ಪರ್ಶ ಚಿತ್ರಣವಿದೆ ನೋಡಿ. ತಂಗಿಯನ್ನು ಕಳಿಸಿ ತನ್ನ ಅಂಗಿಯಿಂದ ಕಣ್ಣೀರೊರೆಸಿಕೊಂಡು ಸಹಿಸಿ ಮತ್ತೆ ತೆವರೇರಿ ಅವಳ ಮುಖ ನೋಡಿ ದುಃಖ ಉಮ್ಮಳಿಸಿದಾಗ ಇನ್ನು ನಮಗೆ ಅವಳು ಎರವೆಂದು ಖಿನ್ನನಾಗಿದ್ದಾನೆ. ಆಗ ಹೆಣ್ಣು ಮಗಳು ತಾನು ಹುಟ್ಟಿ ಮನೆಗೆ ಎರವಾದೆನೆಂದು ಹೀಗನ್ನುವಳು.

ತಾವರಿಯ ಗಿಡಹುಟ್ಟಿ ದೇವರಿಗೆ ನೆರಳಾದೆ
ನಾ ಹುಟ್ಟಿ ಮನಿಗೆ ಎರವಾದೆ । ನನ್ನ ತಮ್ಮ
ತಾ ಹುಟ್ಟಿ ಮನಿಗೆ ಧನಿಯಾದ.

ತನ್ನ ತಮ್ಮನನ್ನು ಧನಿಯೆಂದು ಕರೆದು ತೃಪ್ತಿ ಪಡೆದುಕೊಳ್ಳುತ್ತಾಳೆ. ತನ್ನ ತಮ್ಮನನ್ನು ಮನದುಂಬಿ ಹರಿಸುತ್ತಾಳೆ. ತನ್ನ ಗಂಡನ ಮನೆಯಲ್ಲಿದ್ದಾಗ ತವರ ಮನೆ ಚಿಂತೆಯೇ ಹೆಚ್ಚು ಅವಳಿಗೆ ಆಗ—

ತಂದಿಯ ನೆನದರ ತಂಗುಳ ಬಿಸಿಯಾತ
ಗಂಗಾದೇವಿ ನನ್ನ ಹಡೆದವ್ವ । ನೆನದರ
ಮಾಸಿದ ತಲೆಯು ಮಡಿಯಾಯ್ತು.

ತಂದೆ ತಾಯಿಯರ ನೆನಪು ಮಾಡುವದರಿಂದ ತಂಗುಳ ಬಿಸಿಯಾಗಿದೆ. ಗಂಗೆಯಂತಹ ತಾಯಿಯ ನೆನೆದರೆ ಮೈಲಿಗೆ ಮಡಿಯಾಗಿದೆ. ಆದ್ದರಿಂದ ತವರಿನ ರಸಬಳ್ಳಿ ಹೂ ಬಿಡ ಬೇಕೆಂದು ಬಯಸುವಳು. ತವರಿಗೆ ತನ್ನ ಹೆಣ್ಣನ್ನು ಕೊಡಲು ಬಯಸುವಳು; ಅಥವಾ ಅಲ್ಲಿಯ ಅಣ್ಣ-ತಮ್ಮರ ಮಗಳನ್ನು ತನ್ನ ಮಗನಿಗೆ ತೆಗೆದುಕೊಂಡು ವೈವಾಹಿಕ ಸಂಬಂಧ ಬೆಳೆ ಸಲು ಬಯಸುವಳು ಹಾಲುಂಡ ತವರನ್ನು ಹೊಳೆದಂಡಿಯಲಿ ರುವ ಕರಿಕೆಯ ಬಳ್ಳಿಯಂತೆ ಹಬ್ಬಲೆಂದು ಬಯಸುತ್ತಾಳೆ. ಬಹಳ ದಿನಗಳ ವರೆಗೆ ತವರವರು ಬಾರದಿದ್ದಾಗ ಅವಳ ಅಂತರಂಗ ಮಿಡಿಯುತ್ತದೆ. ಪ್ರೀತಿ ಉಕ್ಕುತ್ತದೆ. ತವರವ ರಿಂದ ಈಗ ಅವಳಿಗೆ ಸೀರೆ-ಕುಬಸ-ಸಂಪತ್ತು ಬೇಕಿಲ್ಲ. ಕೇವಲ ತಮ್ಮವರ ಮುಖ ನೋಡುವ ಬಯಕೆ.

ಸೊಲ್ಲಾಪುರದಣ್ಣಗ ನಿಲ್ಲದಲೆ ಬರಹೇಳ
ಸೀರ್ಯೊಲ್ಲ ಅವನ ಕುಬಸೊಲ್ಲ ಅಣ್ಣನ
ಮಾರಿ ನೋಡಂಥ ಮನವಾಗಿ

ಎಂದು ಹೇಳಿ ಕಳಿಸುವಳು. ಇಲ್ಲಿ ಅಣ್ಣನ ಮೇಲಿ ರುವ ಪ್ರೀತಿ ವ್ಯಕ್ತವಾಗುವದು. ಕಣ್ಣರಿಯದಿದ್ದರೂ ಕರುಳರಿ ಯುವಂತೆ ಅಣ್ಣನಿಗೂ ತಂಗಿಯನ್ನು ನೋಡುವ ಬಯಕೆಯಾ ಗುವದು.

ಅಣ್ಣ ಬರತಾನಂತ ಅಂಗಳಕ ಥಳಿಕೊಟ್ಟ
ರನ್ನ ಬಚ್ಚಲಕ ಮಣಿ ಹಾಕಿ। ಕೇಳೇನ
ಥಣ್ಣಗ್ಹಾರಿಲ್ಲ ತವರವರು.

ತವರ ಮನೆಯವರು ಕ್ಷೇಮವಾಗಿದ್ದರೇನೇ ಅವಳಿಗೆ ಸೊಗಸು. ಅಲ್ಲಿ ಅವರು ದುಃಖ ಪಡುತ್ತಿದ್ದರೆ ಇವಳಿಗೂ ದುಃಖವೇ. ಅದಕ್ಕಾಗಿ ಅವರೆಲ್ಲ ಕ್ಷೇಮವೇ ಅಣ್ಣ ಎಂದು ಕೇಳಿ ರನ್ನ ಬಚ್ಚಲಕೆ ಮಣೆ ಹಾಕಿ ಅಂಗಳಕೆ ಸೀರು ಹೊಯ್ದು ಉಭಯ ಕುಶಲೋಪರಿ ಕೇಳಿ ಆನಂದ ಪಟ್ಟಿದ್ದಾಳೆ.

ಇನ್ನೊಬ್ಬ ತಮ್ಮ ತನ್ನ ಅಕ್ಕನ ಬಗ್ಗೆ ಅನುಕಂಪ ತೋರಿಸಿದ್ದಾನೆ. ಅಕ್ಕನ ಊರಿಗೆ ಮಳೆ ಬಾರದಿದ್ದಾಗ.

ಅಕ್ಕನ ಊರಾಗ ಮಕ್ಕಿಯ ಪಡದಾಗ
ಗಕ್ಕನೆ ಬಾರೊ ಮಳೆರಾಜ। ನನ್ನಕ್ಕ
ಮಕ್ಕಳ ತಾಯಿ ಮರಗ್ಯಾಳೊ

ಎಂದು ಅವಳಿಗಾಗಿ ಇವನೂ ಮರುಗುತ್ತಾನೆ. ಅಕ್ಕ ಮಕ್ಕಳೊಂದಿಗಿತ್ತಿ ಮಳೆಯಾಗದಿದ್ದರೆ ಅವರ ಬದುಕು ಭೀಕರ. ಆ ಸಂಕಟ ನೋಡಬಾರದೆಂದು ಬಯಸಿ ನಿಸರ್ಗರಾಜ, ಮೇಘರಾಜನನ್ನು ಕೈಮಾಡಿ ಕರೆದು ತಮ್ಮಕ್ಕನ ಮಕ್ಕಿಯ ಪಡದೊಳಗೆ ಮಳೆ ಸುರಿಸೆಂದು ಬೇಡಿಕೊಳ್ಳುವನು. ಹೀಗೆ ಅಕ್ಕ-ತಮ್ಮರಲ್ಲಿ ಪರಸ್ಪರವಾದ ಹೃದಯದ ಅನುಕಂಪದ ಮಿಡಿತವಿದೆ. ಜನಪದ ಸಾಹಿತ್ಯದಲ್ಲಿ ಇಂತಹ ಸನ್ನಿವೇಶಗಳು ಸಾಕಷ್ಟು. ಇವುಗಳ ಒಟ್ಟು ಕೇಂದ್ರ ಪ್ರೀತಿ. ಅದೇ ವಿವಿಧ ಸನ್ನಿವೇಶಗಳಿಗೆ ತಕ್ಕಂತಹ ಬಣ್ಣದಳೆದು ಹಲವು ರೂಹು ತಾಳಿದೆ.

ಸಹನೆ :

ಸಹನೆ ಮನುಷ್ಯನಿಗಿರಬೇಕಾದ ಒಂದು ದೊಡ್ಡ ಗುಣ. ಬದುಕು ಕೇವಲ ಗುಲಾಬಿಯಲ್ಲ. ಅದನ್ನೊಳಗೊಂಡ ಮುಳ್ಳಿನ ಕಂಟಿಯೂ ಬದುಕಿಗೆ ಅಂಟಿಕೊಂಡಿದೆ. ಕಷ್ಟಗಳು ಮನುಷ್ಯನಿಗೆ ಬರದೇ ಮತ್ತೇನು ಮರಕ್ಕೆ ಬರುತ್ತವೆಯೆ ? ಎಂದು ಬಂದ ಕಷ್ಟಗಳನ್ನು ಇಲ್ಲಿಯ ಗಂಡು-ಹೆಣ್ಣು ಎದುರಿಸಲು ಪ್ರಯತ್ನಿಸುತ್ತಿವೆ. ಹಳ್ಳಿಗರ ಬಾಳಿನಲ್ಲಿ ಅನೇಕ ಸಲ ಎಡರು-ತೊಡರುಗಳು ಬರುವುದುಂಟು. ಮುನಿಸು, ಕುನಸು, ವೈಮನಸ್ಸು, ಬಂಜೆತನ, ಹಗೆತನ, ಅಸೂಯೆ, ಸವತಿಮತ್ಸರ, ವಾದ, ಜಗಳ, ಅಳು, ದುಃಖ-ಮುಂತಾದವು ಅವಳ(ರ) ಮನವನ್ನು ಛಿದ್ರಗೊಳಿಸುವವು. ಇದಕ್ಕಿಂತ ಮೇಲೆ ಗಂಡನ ಮುನಿಸು, ಸೊಳೆಯ ವೈಮನಸ್ಸು, ಸವತಿ ಮಕ್ಕಳಲ್ಲಿ ಮತ್ಸರ, ಮುಂತಾದ ಗುಣಗಳನ್ನು ಮೀರಿ ಅವುಗಳನ್ನೆಲ್ಲ ಎದೆಗಾರಿಕೆಯಿಂದ ಎದುರಿಸಬೇಕಾಗುತ್ತದೆ. ಅದಕ್ಕಾಗಿ ಇಂತಹ ನೋವು, ತೊಂದರೆ ಕುತ್ತಿಗೆ ತನಕ ಬಂದರೂ ತಾಳಬೇಕು. "ತಾಳಿ" ಎಂದು ಗಂಡ ಅವಳಿಗೆ ತಾಳಿಯನ್ನು ಕಟ್ಟಿದ್ದಾನೆ. ಹೆಂಡತಿಯಾದವಳು ಅದನ್ನು ಅನುಸರಿಸುತ್ತಾಳೆ. ಬೇಕಾದಂತಹ ಕಷ್ಟ ಬಂದರೂ ಅವಳು ಸಹಿಸಿಕೊಳ್ಳುವ ಸಹನೆ ದೊಡ್ಡದು. ತಾಳಿದವರೇ ಅಲ್ಲವೇ ಬಾಳುವವರು. ಅವಳಿಗೆ ಗಂಡನಿಂದ, ಸವತಿಯರಿಂದ ಅತ್ತೆ ನಾದಂದಿರಿಂದ, ಮೈದುನ ಭಾವಂದಿರರಿಂದ ಕಷ್ಟಗಳು ಬಂದರೂ ಬರಬಹುದು. ಆಗ ಅವಳು

ಎದುರಿಸಿ ಪ್ರಟಿಕಿಟ್ಟ ಚಿನ್ನವಾಗುವಳು. ಗಂಡ ಸಿಟ್ಟು ಮಾಡಿದಾಗ—

ಸಿಟ್ಟು ಮಾಡುವಿರೇನು ಸಿರಿಯರು ನನಮ್ಯಾಲಿ
ಕಟ್ಟಿಕೋ ಬ್ಯಾಡ್ರಿ ವೈಮನಸ। ಹಡೆದವರು
ಕೊಟ್ಟು ಹೋಗ್ಯಾರ ನಿಮ್ಮ ನಿಗೆ

ಗಂಡ ಸಿಟ್ಟಿಗೆದ್ದರೂ ನೀವು ನನ್ನ ಸಂಪತ್ತು. ನನ್ನ ಮೇಲೆ ವೈಮನಸ್ಸು ಮಾಡಬೇಡಿರಿ. ನೀವೇ ನನ್ನ ಸರ್ವಸ್ವವೆಂದು ನಾನು ಬಗೆದಿದ್ದೇನೆ ಎಂದು ಹೇಳುತ್ತಾಳೆ. ಅಲ್ಲದೆ ಹಡೆದವರು ನಿಮ್ಮ ಮನೆಗೆ ಕೊಟ್ಟು ಹೋಗಿದ್ದಾರೆಂದು ಹೇಳಿ ಅವನ ಮನವೊಲಿಸುವಳು. ಸೂಳೆಯ ಸಂಗ ಬಯಸಿ ತನ್ನ ಗಂಡ ಅವಳೆಡೆ ಹೋದಾಗ ತನ್ನ ಸುಖವನ್ನೇ ಕಳೆದುಕೊಂಡಿದ್ದಾಳೆ. ಸೂಳೆ ಇಷ್ಟಕ್ಕೇ ಬಿಡದೇ ಅವಳನ್ನು ಅವಳ ಗಂಡನ ಕೈಯಿಂದ ಬಡಿಸುತ್ತಾಳೆ. ಇಷ್ಟಾದರೂ ಅವಳಲ್ಲಿ ಸಹನೆಯಿದೆ.

ಸೂಳಿಯ ವೈಮನಸ ಯಾರಿಗ್ಹೇಳಲಿ ದೇವ
ತಾಳ್ಯಾಗಿ ಹೋದ ಮನಿರಾಯ| ಗಯ್ಯಾಳಿ
ಹೇಳಿ ಬಡಿಸ್ಯಾಳ ಹಟತೊಟ್ಟ.

ಇಂತಹ ಕಷ್ಟಕ್ಕೂ ಅವಳ ಸಹನೆ ದಿಟ್ಟತನ ತೋರಿದೆ. ಮನೆಗೆ ಬಡತನ ಬಂದಾಗ ಇನ್ನೊಬ್ಬರ ಮುಂದೆ ಕೈಯೊಡ್ಡದೆ ಅದನ್ನು ಸಹಿಸುವಳು. ಅಂತಹ ಕಷ್ಟ ಸಹಿಷ್ಣುತೆ ಅವಳಲ್ಲಿದೆ.

ಬಡತನ ಬಂದರ ಬಾಗಿಕೊಂಡಿರುವೆನೊ
ಬಾರೆನಣ್ಣಯ್ಯ ನಿನಮನೆಗೆ ನಿನಮಡದಿ

ಏಳಲ ಮಾಡಿ ನಡಿದಾಳ

ಬಡತನ ಬಂದಾಗ ಬೀಗರ ಮನೆಗೆ ಕೈಯೊಡ್ಡಬಾರದೆಂದು ಬಗೆಯುತ್ತಾಳೆ. ಅಣ್ಣನಿದ್ದರೂ ಅವನ ಮನೆಗೆ ಹೋಗಲು ತಯಾರಿಲ್ಲ. ಅಣ್ಣ ತನ್ನವನಾದರೆ ಆತನ ಮಡದಿ? ಆದಕ್ಕಾಗಿ ತನ್ನ ಬಡತನ ನುಂಗಿಕೊಂಡಿದ್ದಾಳೆ. 'ಬಡತನ ನನಗಿರಲಿ ಬಾಳ ಮಕ್ಕಳಿರಲಿ' ಎಂದು ಬಡತನದ ಭವನೆಯಲ್ಲೂ ಆಶಾವಾದಿಯಾಗಿದ್ದಾಳೆ. ಬೇಕಾದಂತಹ ತೊಂದರೆ ಬಂದರೂ ಅದನ್ನು ಸಹಿಸುವಳು. ಬಿಸಿಲಿರಲಿ, ಮಳೆಯಿರಲಿ ಮನೆಗೆಲಸಕ್ಕೆ ಮುಂದಾಗುವಳು.

ಮಟ ಮಟ ಮದ್ದೀನ ತಿಟ ತಿಟ ಕುಬ್ಬುಸ
ಸೇದುವ ಹಗ್ಗ ಬಗಲಾಗ । ಹಿಡಕೊಂಡು
ಹೋಗುತ ಶಿವನ ನೆನಸ್ಯಾಳ.

ಸುಡುತ್ತಿರುವ ಬಿಸಿಲು, ತಿಟಿಯಾದ ಕುಬ್ಬಸವನ್ನು ತೊಟ್ಟು ಸೇದುವ ಹಗ್ಗವನ್ನು ಬಗಲಲ್ಲಿ ಹಿಡಿದುಕೊಂಡು ನೀರು ತರಲು ಉಸುರು ಹಾಕುತ್ತ, ಶಿವ ಶಿವ ಎನ್ನುತ್ತ ಹೊರಟಿದ್ದಾಳೆ. ಹೇಗಾದರೂ ಮಾಡಿ ನೀರು ತರಲೇ ಬೇಕು ಸಂಸಾರ ಬಂಡಿ ಉರುಳಿಸಲೇಬೇಕು. ತಾನು ತವರು ಮನೆಯಲ್ಲಿ ಸುಖವುಂಡು ಬೆಳೆದಿರುವುದರಿಂದ ಅತ್ತೆಯ ಮನೆಯಲ್ಲಿಯ ಕೆಲಸ ಭಾರವಾಗಿದೆ. ಆದರೂ ಅವಳು ಸಹಿಸಿ,

ಅತ್ತಿಯ ಮನಿಯಾಗ ಅರವತ್ತು ಗಂಗಾಳ
ಬೆಳಗತೇನತ್ತಿ ಬೈಬ್ಯಾಡ । ತವರವರು
ಸರಮುತ್ತಮಾಡಿ ಸಲವ್ಯಾರ.

ಎಂದು ಅತ್ತೆ ಹೇಳಿದ ಎಲ್ಲ ಕೆಲಸವನ್ನೂ ಮಾಡುವಳು. ಯಬಿಟ್ಟು ಬೈಬೇಡ ಅತ್ತೆ, ನಾನು ತವರಲ್ಲಿ ಕೆಲಸ ಮಾಡಿ ವಳು ಅಲ್ಲ. ಕೆಲವು ದಿನ ಗತಿಸಿದ ಮೇಲೆ ರೂಢಿ ಬೀಳ ಹುದು. ಅಲ್ಲಿಯು ತನಕ ಮನ್ನಿಸಿರಿ ಎಂದು ಕೇಳುವಲ್ಲಿ ಅವಳ ಹನೆ ವ್ಯಕ್ತವಾಗುವುದು. ಅಲ್ಲದೆ,

ಭಾವಯ್ಯ ಮುನಿದರ ಬಲಗಾಲ ಹಿಡದೇನ
ಭಾವಯ್ಯನ ಮಡದಿ ನೆಗೆಣ್ಣಿ| ಮುನಿದರ
ಬಾರಕ್ಕನೆಂದು ಕರದೇನ.

ಭಾವ ಸಿಟ್ಟಿಗೆದ್ದರೆ ಅವನ ಬಲಗಾಲು ಹಿಡಿದು ಕ್ಷಮೆ ಯಾಚಿಸುವಳು. ಭಾವನ ಹೆಂಡತಿ ಮುನಿದರೆ ಅಕ್ಕ ಎಂದು ೀತಿಯಿಂದ ಕರೆದು ಒಂದಾಗಿ ಜೀವನ ಸಾಗಿಸುವಳು. ಸುತ್ತ ುತ್ತಲಿನವರು ತೊಂದರೆ ಕೊಟ್ಟರೂ ತಾನು ಒಳ್ಳೆಯುದನ್ನು ಾಡಿ ಕಷ್ಟವನ್ನು ಸಹಿಸಿಕೊಳ್ಳುವ ಸಹನೆ ಅವಳಲ್ಲಿದೆ.

ಶ್ರೀಗಂಧ ತೇಯ್ದಂತೆ ಕಂಪುಬಿಡುವುದಲ್ಲವೆ? ಮುರಲಿ ನು ಸುಟ್ಟುಕೊಂಡರೂ, ಕೊರೆದುಕೊಂಡರೂ ಒಳ್ಳೆಯ ದವನ್ನು ಧ್ವನಿಯನ್ನು ಕೊಡುವುದು. ಕರ್ಪೂರ ತಾನು ಟ್ಟುಕೊಂಡರೂ ಸುವಾಸನೆಯನ್ನು ಕೊಡುವಂತೆ ಸ್ತ್ರೀ ಷ್ಟವನ್ನು, ನೋವನ್ನು ನುಂಗಿ, ಸಹಿಸಿ ಸಹಧರ್ಮಿಣಿ ಾಗಿದ್ದಾಳೆ. ಇಷ್ಟಾದರೂ ಗಂಡ ಸೇರದಿದ್ದಾಗ ಸಹಿಸಿ ತಿಯಿಂದ ಕರೆದ.ಕೊಳ್ಳುತ್ತಾಳೆ. ತಾಳೆ ಹೂವಿನ ತಲೆ ಬಿಗೆ ಒರಗುತ್ತಾಳೆ. ಹುಚ್ಚನಂತಹ ಗಂಡನೊಂದಿಗೆ ಸುವೆ ಹೇಗೆ ಸಾಗಿಸಲಿ ಎಂದು ಚಿಂತಿಸುವಳು.

ಹುಚ್ಚನಂತಹ ಗಂಡ ಹುಲಿಯಂತಹ ಮೈದೂನ
ದಕ್ಷ್ಯೂತ್ರೆವ್ವ ನನ್ನ ನೆಗಿಯಾಣಿ। ಕೈಯಾಗ
ಹ್ಯಾಂಗೀಸಿ ಬರಲೆ ಹಡೆದವ್ವ.

ಗಂಡ ಹುಚ್ಚನಂತಪನು ಮೈದುನ ಹುಲಿಯಂತ್ರವ ನೆಗೆಣ್ಣಿ ತೀರ ಸಿಡಿ ಸಿಡಿ ಮಾಡುವವಳು. ಇವರ ಕೈಯೊಳಗೆ ನಾ ಹೇಗೆ ಜೀವನ ಸಾಗಿಸಬೇಕೆಂದು ನೊಂದಿದ್ದಾಳೆ. ಇದನ್ನೆಲ್ಲ ಹೇಗೋ ಅಟ್ಟಿಸಿಕೊಂಡಿದ್ದರೆ ತೀರದು. ಸಮಾಜಕ್ಕೂ ಅಂಜಿ ಬದುಕಬೇಕು. 'ಜನಮರುಳೋ ಜಾತ್ರೆ ಮರುಳೋ' ಎಂಬಂತೆ ಸಮಾಜ ಒಂದಿಲ್ಲೊಂದು ಹೆಸರಿಡಲು ಪ್ರಯತ್ನಿಸುವುದು. ಗಡಿಗಿ ಬಾಯಿ ಮುಚ್ಚಬಹುದು ಜನರ ಬಾಯಿ ಮುಚ್ಚಲು ಸಾಧ್ಯವೇ ? ಸ್ವಲ್ಪ ಮೈಮರೆತರೆ ತೀರಿತು ಸಮಾಜ ಹೆಸರಿಟ್ಟೇ ಬಿಡುವುದು.

ಅತ್ತರ ಅದರುಟ್ಟ ನಕ್ಕರ ನಗ್ಲೇಡ
ಜಾಡಿಸಿ ನಡದರ ಜನದ್ವರಲಿ। ಹಡೆದವ್ವ
ಹ್ಯಾಂಗೀಸಿ ಬರಲಿ ಜಗದಾಗ.

ಈ ಸಂಸಾರ ಸಾಗರದಲ್ಲಿ ಈಸಿ ಪಾರಾಗುವುದು ಕಠಿಣ. ಈಜಬೇಕು ಈಜಿ ಜಯಿಸಬೇಕಲ್ಲವೆ ? ಅತ್ತರೂ ಜನ ಹೆಸರಿಡುವರು. ನಕ್ಕರೆ ನಗ್ಗೇಡು ಮಾಡುವರು. ದಿಟ್ಟತನದಿಂದ ನಡೆದರೆ, ಗರ್ವವೆಂದು ಬಗೆಯುವರು. ಹೇಗಾದರೂ ಜನರ ಅಪವಾದ ತಪ್ಪಿದ್ದಲ್ಲವೆಂದು ನೋಡಿ, ಜಾಗರೂಕಳಾಗಿ ಸಹಿಸಿಕೊಂಡು ಸಾಗುವಳು. ಗುಣ ಹೋದ ನಾರಿ ನುಂದೆ ಹೆಣಕ್ಕೆ ಸಮ. ನಾರಿಗೆ ಗುಣವೇ ಮೇಲಲ್ಲವೆ ? ಅದಕ್ಕೆ

ಅವಳು ತೂಕದಿಂದ ನಡೆದಿದ್ದಾಳೆ.

ಮಕ್ಕಳಾಗದ ಹೆಣ್ಣಿನ ನೋವು ಹೇಳಲಸದಳ. ಅವಳು ಇಲ್ಲಿ ತಿರಸ್ಕೃತಳು. 'ತಾಯಿಯಾಗದ ಹೆಣ್ಣೊಂದು ಹೆಣ್ಣೆ ? ಎಂಬ ಉದ್ಗಾರ ಜನಸಾಮಾನ್ಯರಲ್ಲಿ ಇದೆ.

ಬಳ್ಳಿ ಹೂ ಬಿಟ್ಟರೆ ಚೆಂದ. ಹೂ ಬಿಡದ ಬಳ್ಳಿಯನು ಕೀಳುವಂತೆ ಸಮಾಜ ಮಗುವನ್ನು ಪಡೆಯದ ಹೆಣ್ಣಿಗೂ ಹಿಷ್ಕಾರ ಹಾಕುವುದು. ಬಂಜೆ ಹೆರವರ ಮಕ್ಕಳನ್ನು ುಟ್ಟಕೂಡದು, ನೋಡಕೂಡದು. ಇವಳಿಗೆ ಬಂಜೆತನದ ಂತೆ, ಜನ ಹರಲಿ ಚಿಂತೆ, ಬಾಲಕರಿಲ್ಲದ ಬಾಲಿಯ ಜನ್ಮ ಾಡಿಗೆ ಎತ್ತು ದುಡಿದಂತೆ. ಬಂಜೆಂಬ ಶಬ್ದ ಹೋಗುವಂತೆ ಾಡೆಂದು ಬೇಡಿಕೊಳ್ಳುವಳು. ಜನರ ಚುಚ್ಚು ಮಾತು ಳನ್ನು ಕೇಳಿ ನೊಂದು ದೇವರಲ್ಲಿ ಮೊರೆ ಹೋಗುವಳು.

ಈ ಗೋಳನ್ನೆಲ್ಲ ನುಂಗಿ, ಸಹನೆಯ ಸಾಕಾರ ಮೂರ್ತಿ ಯಾಗಿ, ತಾಳ್ಮೆಯ ತಾಯಿಯಾಗಿ ಮುನ್ನುಗ್ಗುವಳು. ಅಡಿಯ ುಂದಿಡೆ ಸ್ವರ್ಗವೆಂಬುದನ್ನು ಅರಿತುಕೊಂಡೇ ಮುನ್ನಡೆದಿ-ದ್ದಾಳೆ. ಅವಳ ಸಹನೆಯ ಒಂದು ಘಟ್ಟಿಯನ್ನಿಲ್ಲಿ ನೋಡ ಹುದು.

ಆಸರಕಿ ಅಳದಿಟ್ಟ ಬ್ಯಾಸರಿಕಿ ಬಳದಿಟ್ಟ
ಚಿಂತಿ ಕಾಲಾಗ ತುಳದಿಟ್ಟ। ಈ ದೇಹ
ಶೀಲ ಮಾಡಿಟ್ಟ ಜನದಾಗ.

ಚಿಂತೆಯನ್ನು ತೊಳೆದು, ಆಸರಿಕೆ ಬೇಸರಿಕೆಯನ್ನು ಳಿದು ಸರಿಸಿಟ್ಟು ದೇಹವನ್ನು ದುಡಿಸಿ ಜಗತ್ತಿನಲ್ಲಿ ಶೀಲ

ಕಾಪಾಡಿಕೊಂಡು ಬಂದ ಈ ಸ್ತ್ರೀಯು ಸಹನೆ ಜೀವನದ ಒಂದು ಒಳ್ಳೆಯ ಮೌಲ್ಯ. ಅದು ಅಂದಿನ ಬದುಕಿನ ಸಾರ್ಥಕ್ಯ.

ನೀತಿ :

ನೀತಿ ಮನುಷ್ಯನ ಸಂಸ್ಕೃತಿಯ ಒಂದು ಪ್ರತೀಕ. ವ್ಯಕ್ತಿಯ ನಡೆ-ನುಡಿಯು ಅದರಲ್ಲಿ ಅಡಕವಾಗಿದೆ. ಒಂದರ್ಥ ದಲ್ಲಿ ಒಳ್ಳೆಯುದೇ ನೀತಿಯಾಗುತ್ತದೆ. ಪೂರ್ವಕಾಲದಿಂದ ನಡೆದು ಬಂದಿರುವ ಒಳ್ಳೆಯ ಆಚಾರ ವಿಚಾರಗಳು ರೂಢಿ ಸಂಪ್ರದಾಯಗಳು ಕೂಡ ಈ ನೀತಿಯಲ್ಲಿ ಒಳಗೊಳ್ಳುತ್ತವೆ. ಇದರ ವ್ಯಾಪ್ತಿ ದೊಡ್ಡದು.

ಜನಪದ ಸಾಹಿತ್ಯದಲ್ಲಿ ನೀತಿ ಸುಂದರವಾಗಿ ಮೂಡಿ ಬಂದಿದೆ. ಈ ಜನರಲ್ಲಿ ಗುರು-ಹಿರಿಯರಲ್ಲಿ ಗೌರವ, ಧರ್ಮ ದಲ್ಲಿ ಶ್ರದ್ಧೆ, ದೇವರಲ್ಲಿ ಭಕ್ತಿ ಇವು ಇದ್ದವು. ನೀತಿಯೆಂದರೆ ನೈತಿಕ ವರ್ತನೆ. ನೀತಿಯನ್ನು ನ್ಯಾಯ, ಧರ್ಮ, ಆಚಾರ-ವಿಚಾರ ಅನ್ನುವ ಅರ್ಥದಲ್ಲಿ ನಾವು ಬಳಸುತ್ತೇವೆ. ಇಷ್ಟೇ ಅಲ್ಲ, ಗೊತ್ತಿದ್ದರೂ ಅನುಭವವಾಗುತ್ತಿದ್ದರೂ ಕೆಲವು ಸಂದರ್ಭಗಳಲ್ಲಿ ಹೇಳಲಿಕ್ಕಾಗದ ಪ್ರಸಂಗದಲ್ಲಿಯೂ ಕೂಡ ನೀತಿಯು ಬಳಸಲ್ಪಡುತ್ತದೆ. ನೀತಿಯು ಮಾನವರನ್ನು ಶಾಶ್ವತ ಸುಖದ ಕಡೆಗೆ ಒಯ್ಯುವ ಒಂದು ಸಾಧನವಾಗಿದೆ. ಹಸು ತಿಂದ ಹುಲ್ಲು ಹಾಲಾಗಿ ಅಮೃತವಾದಂತೆ ಕವಿಯ ಪ್ರತಿಭೆಯಿಂದ ಮೂಡಿ ಬಂದ ನೀತಿಯೂ ಗ್ರಾಹ್ಯವಾಗುತ್ತದೆ. ಜನಪದ ಸಾಹಿತ್ಯದಲ್ಲಿ ಈ 'ನೀತಿ'ಯು ತುಂಬಿಕೊಂಡಿದೆ. ಬೆಳಗಿನಲ್ಲಿ ಎದ್ದು ದೇವರನ್ನು ನೆನೆವುದನ್ನು ಮೊದಲು ಮಾಡಿ ಕೊಂಡು ಸಾಯುಂಕಾಲ ಮಲಗುವವರೆಗೆ ಅವಳು ಮಾಡುವ

ಎಲ್ಲ ಕಾರ್ಯದಲ್ಲಿ ನೀತಿ ಅಡಕವಾಗಿದೆ. ಇಲ್ಲಿಯ ತ್ರಿಪದಿಗಳಲ್ಲಿ ನೀತಿಯನ್ನು ಸ್ಪಷ್ಟವಾಗಿಯೂ ಪರ್ಯಾಯವಾಗಿಯೂ ಹೇಳಲಾಗಿದೆ. ನೀತಿಯನ್ನು ಗಂಡು-ಹೆಣ್ಣುಗಳಿಗಿಬ್ಬರಿಗೂ ಹೇಳಲಾಗಿದೆ. ಪರಸ್ತ್ರೀಯರನ್ನು ನೋಡಬಾರದು. ಸ್ತ್ರೀ ಮಾಯೆ. ಆದಕ್ಕೆ ವ್ಯರ್ಥಸಮಯ ಹಾಳುಮಾಡುವದು ಸರಿಯಲ್ಲವೆಂದು ಒಬ್ಬಳು ಹೀಗೆ ಹೇಳಿದ್ದಾಳೆ.

ವಾರಿ ರುಂಬಾಲ ಸುತ್ತಿ ದಾರ್ಯಾಗ ನಿಂತಿದ್ಯ
ಋಾರ್ಯಾ ಇಲ್ಲೇನೊ ಮನಿಯಾಗ। ನನತಮ್ಮ
ನಾರಿಯಿಲ್ಲೇನೊ ಮನಿಯಾಗ.

ಎಂದು ಹೇಳಿ ಅವನ ಹೆಂಡತಿಯ ನೆನಪು ಅವನಿಗೆ ಮಾಡಿಕೊಟ್ಟು ಹೀಗೆ ದಾರಿಯಲ್ಲಿ ನಿಂತು ಇನ್ನೊಬ್ಬಳನ್ನು ನೋಡಬಾರದೆಂಬ ನೀತಿಯನ್ನು ಹೇಳುವವಳು ಒಬ್ಬಳಾದರೆ, ಇನ್ನೊಬ್ಬಳು.

ಹೆಣ್ಣೆಂದು ರಾವಣ ಮಣ್ಣು ಮುಕ್ಕಿದನಯ್ಯ
ಹೆರವರ ಹೆಣ್ಣು ಬಯಸನೆ। ಲಗ್ನದ
ಸತಿಯೊಡನೆ ಸುಖದಿ ಬಾಳಣ್ಣ.

ಎಂದು ಪೌರಾಣಿಕ ಘಟನೆಯನ್ನು ನೆನಪಿಗೆ ತಂದುಕೊಡುವಳು. ಜನಪದದಲ್ಲಿಯ ಹೆಣ್ಣುಮಕ್ಕಳಿಗೆ ಗುಣವೇ ಶೃಂಗಾರ. ಸೌಂದರ್ಯಕ್ಕೆ ಮರುಳಾಗುವದು ಮರುಳತನವಾದೀತು! ಕೊನೆಯವರೆಗೆ ಉಳಿಯುವದು ಸೌಂದರ್ಯವಲ್ಲ ಗುಣ. (ಇಲ್ಲಿ ಸೌಂದರ್ಯವೆಂದರೆ ರೂಪು) ಅಂತಹ ಗುಣಕ್ಕೆ ಬೆಲೆ ಕೊಡಬೇಕು.

ಚೆಲುವಿ ಚೆಲುವಿಯಂತ ಅತಿಬಾಯಿ ಬಿಡಬ್ಯಾಡ
ಚೆಲುವಿದ್ಧರೇನು ಗುಣವಿಲ್ಲ! ಕೊಳೆನೀರ
ತಿಳಿಯಿದ್ದರೇನು ರುಚಿಯಿಲ್ಲ.

ಹೆಣ್ಣಿನ ಚೆಲುವಿಕೆಗೆ ಮಾರು ಹೋಗದೆ ಅವಳ ಗುಣಕ್ಕೆ ಬೆಲೆಕೊಡು ಎಂದು ಹೇಳುವಳು. ಕೆಂಪು ಹೆಂಡತಿಯೆಂದು ಮನಸೋತರೆ ಅವಳು ಅತ್ತೀಯ ಹಣ್ಣು. ಒಳಗೆ ನೋಡಿದರೆ ಹುಳುಬಹಳ. ಕರಿಯ ಹೆಂಡತಿಯಿದ್ದರೂ ನಡೆದೀತು. ಗುಣ ಶ್ರೇಷ್ಠವಾಗಿದ್ದರೆ ನೀರಲ ಹಣ್ಣಿನಂತಹ ಮಾಧುರ್ಯ ಅದರಲ್ಲಿ (ಅವಳಲ್ಲಿ)ಇದೆ.ಬಡತನ ಸಿರಿತನ ಮುದ್ದಿನ ಬಿಸಿಲು.ಹೆಣ್ಣು ಬಡ ತನದಲ್ಲಿರಲಿ, ಸಿರಿತನದಲ್ಲಿರಲಿ, ತನ್ನ ಶೀಲವನ್ನು ಕಾಯ್ದು ಕೊಂಡು ಬಂದಿದ್ದಾಳೆ. ಪಾತಿವ್ರತ್ಯವೇ ಅವರ ಸೊತ್ತು ಅದನ್ನು ಕಳೆದುಕೊಂಡ ಹೆಣ್ಣಿಗೆ ಸಮಾಜದಲ್ಲಿ ಸ್ಥಾನಮಾನ ಗಳಿಲ್ಲ. ಅವಳಮೇಲೆಕಣ್ಣು ಹಾಕಿದವನಿಗೆ ಅವಳು ಕೊಡುವ ಎಚ್ಚರಿಕೆ ಹೇಗಿದೆ ನೋಡಿ

ಬಡವನ ಹ್ಯಾಣೂತಿ ನಡಗೀಲೆ ಸುಂದರಿ
ನಡು ಓಣ್ಯಾಗೊಬ್ಬ ನೆದರಿಟ್ಟ ! ಕೇಳ್ಯಾನ.
ಕಡ್ಡಾಕೊಡು ಬಾಲಿಕುಡಿ ಹುಬ್ಬ.

ಎಂದು ಒಬ್ಬ ಶ್ರೀಮಂತ ಅವಳ ಶೀಲ ಕೇಳಿದರೆ ಅದಕ್ಕೆ ಅವಳು

ಕಡ್ಡಾ ಕೊಡಲಾಕ ಕಡ್ಲೆಲ್ಲಾ ಗೋದೆಲ್ಲ
ನಿನಗಿಂತ ಡುರಸ ಮನಿಪುರುಸ । ಕೇಳಿದರ
ಕರಿಕಬ್ಬ ಮಾಡಿ ಕಡಿದಾನ.

ತನ್ನ ಗಂಡ ಶೂರ, ಶಕ್ತ. ನೀನೇನು ಸಿರಿವಂತನಿರಬಹುದು. ನಿನ್ನ ಸಿರಿತನಕ್ಕೆ ಮರುಳಾಗುವವಳಲ್ಲ. ಕುಡಿ ಹುಬ್ಬ ಕಣ್ಣ ಕೇಳಿದರೆ ನನ್ನ ಗಂಡ ನಿನ್ನನ್ನು ಬಿಡುವನೆ ? ಕರಿಕಬ್ಬು ಕಡಿದಂತೆ ಕಡಿದು ಹಾಕುತ್ತಾನೆ ಎಂದು ತನ್ನ ಗಂಡನ ಶೌರ್ಯವನ್ನು, ತನ್ನ ಶೀಲವನ್ನು ಮೆರೆದಿದ್ದಾಳೆ. ಹೆರವರ ಹೆಣ್ಣಿಗಾಗಿ ಹೊರಗೆ ಮಲಗುವ ಪುರುಷನನ್ನು ಕಂಡು ಮತ್ತೊಬ್ಬಳು ಹೀಗೆ ಹೇಳಿದ್ದಾಳೆ.

ಹೆರವರ ಹೆಣ್ಣೀಗಿ ಹೊರಗ ಮಲಗುವ ಜಾಣ
ಗಿಡದ ವ್ಯಾಲೆರಡು ಗಿಣಿಕೂತು | ನುಡಿದಾವ
ಎರವನ್ನೋ ರಾಯ ನಿನಜೀವ.

ಪರಸ್ತ್ರೀಯರ ಸಂಗಕ್ಕೆ ಹೊರಗೆ ಮಲಗಲು ಹೊರಟ ಆ ಪುರುಷನಿಗೆ ಅವನ ಜೀವ ಅಳಿಯುತ್ತದೆ ಎಂದು ಗಿಳಿಗಳು ಸಹಿತ ಭವಿಷ್ಯ ನುಡಿದಿವೆ. ಅದನ್ನು ಲೆಕ್ಕಿಸದೇ ಮುಂದುವರೆಸಿದ ಪರಸ್ತ್ರೀಯರ ಸಂಗದ ಬಯಕೆ ಕೊನೆಗೆ ವೇಶ್ಯಾವಾಟಿಗೆ ಹಚ್ಚುತ್ತದೆ. ಅದನ್ನು ಕಂಡವರು ಸೂಳೆಗಾಗಿ ನಾಶವಾದವರನ್ನು ಕುರಿತು ಬುದ್ಧಿವಾದ ಹೇಳುವರು. ಸೂಳೆಯ ಸೆರಗಿನಲ್ಲಿ ಬಿದ್ದವನ ಪಾಡು ಗಾಳಕ್ಕೆ ಸಿಕ್ಕ ಮೀನು.

ಸೂಳೆಗೆ ಹೋದವ ಏನಾದ ಎಂತಾದ
ಕಾಡು ನಾಯಾದ ಕಪಿಯಾದ| ಆ ಮರುದಿನಕ
ಸೂಳೆಯ ಕಾಲಿಗೆ ಕೆರವಾದ.

ಅಷ್ಟೊಂದು ಹೀನಮಟ್ಟಕ್ಕೆ ಇಳಿಸುವವನು. ನಾಯಿಯಾಗಿ, ಕಪಿಯಾಗಿ, ಕೊನೆಗೆ ಸೂಳೆಯ ಕಾಲಿಗೆ ಕೆರವಾಗು

ನನು. ಹೀಗೆ ವೇಶ್ಯೆಯ ಸಂಗ ಮಾಡಿದವರ ಸ್ಥಿತಿಯಾಗುವದು. ಆದ್ದರಿಂದ ಬಚ್ಚಲದ ರೊಜ್ಜಿನಂತಹ ಸಂಗವನ್ನು ಬಿಡಬೇಕೆಂದು, ಮಾಡಬಾರದೆಂದು ನೀತಿಬೋಧನ ಮಾಡಿದೆ. ಈ ಜನಪದ ಸಾಹಿತ್ಯ, ಇದು ವಿಟಪುರುಷನಿಗೆ ಹೇಳಿದ ನೀತಿಯಾದರೆ ಹೆಣ್ಣುಮಕ್ಕಳಿಗೂ ಒಳ್ಳೆಯ ಬದುಕು ಬದುಕುವಂತೆ ಹೇಳಿದೆ. ಇದು ಸ್ಪಷ್ಟ ನೀತಿ.

ಅತ್ತೀಯ ಮನಿಯಾಗ ಮುತ್ತಾಗಿ ಇರಬೇಕ
ಹೊತ್ತ ನೀಡಿದ್ದ ಉಣಬೇಕ | ತವರವರು
ಉತ್ತಮರ ಹೆಸರ ತರಬೇಕ.

ಅತ್ತೆಯ ಮನೆಯಲ್ಲಿಯ ಕಷ್ಟ ಸುಖಗಳನ್ನು ಉಂಡು, ಒಳ್ಳೆಯ ತವರಮನೆ ಹೆಸರನ್ನು ತರಬೇಕು. ಕೊಟ್ಟಮನೆಗೆ ಹುಟ್ಟಿದ ಮನೆಗೆ ಹೂವ ತರಬೇಕಲ್ಲದೆ ಹುಲ್ಲು ತರಬಾರದು. ಎಂದು ತಾಯಿ ನೀತಿಯನ್ನು ಬೋಧಿಸಿದರೆ ಸರದಾರನಂತಹ ಅವಳ ಅಣ್ಣ–

ಮುಂದಿ ಮಕ್ಕಳೊಳಗ ಛಂದಾಗ್ಯೊಂದಿರಬೇಕ
ನಂದೀಯ ಶಿವನ ದಯದಿಂದ | ಹೋಗಾಗ
ಮುಂದಿ ಬಾಯಾಗ ಇರಬೇಕ.

ಎಂದು ಜನರ ಕಣ್ಣಲ್ಲಿ ಉಳಿಯದೆ ಅವರ ನಾಲಗೆಯ ಮೇಲೆ ಉಳಿಯುವಂತೆ ನೀತಿ ಹೇಳಿದ್ದಾನೆ. ಮನುಷ್ಯ ಬದುಕಿದ್ದ ಅನ್ನಲು ಸಾಕ್ಷಿಯೆಂದರೆ, ಆವನು ಸತ್ತಾಗ ನಾಲ್ಕು ಜನರು ಕಣ್ಣೀರುದುರಿಸಬೇಕು. ನಾಲ್ಕು ಜನರಿಗೆ ಬೇಕಾಗಿರಬೇಕು. ಅಲ್ಲದೆ ಸಿರಿತನ ಬಂದಾಗ ಸೊಕ್ಕದೆ ಬಡತನಕ್ಕೆ ಬಗ್ಗದೆ

ಯಾವಾಗಲೂ ಹಸನ್ಮುಖಿಯಾಗಿರಬೇಕೆಂದು ಹೇಳಿದ್ದಾನೆ. ಬಡವರಿಗೆ ಸಹಾಯ ಮಾಡಬೇಕೆಂಬ ಮಾನವೀಯ ಅನುಕಂಪ ವನ್ನು ಅರುಹಿದ್ದಾನೆ. ಬಡವ ಸಿರಿವಂತರೆಂಬ ಭೇದ ಬೇಡ. ಇದು ಶಾಶ್ವತವಲ್ಲ. ಆದ್ದರಿಂದ,

ಬಂಗಾರ ಬಳಿಯಿಟ್ಟು ಬೈಬ್ಯಾಡ ಬಡವರಿಗೆ
ಬಂಗಾರ ನಿನಗ ಸ್ಥಿರವಲ್ಲ । ಮಧ್ಯಾಹ್ನ
ಬಿಸಿಲು ಹೊಳ್ಳುವದು ತಡವಲ್ಲ.

ಚಂಚಲೆಯಾದ ಲಕ್ಷ್ಮಿಗೆ ಆಸೆ ಮಾಡುವದು ಹಿತವಲ್ಲ. ಆಸೆಯೇ ದುಃಖಕ್ಕೆ ಕಾರಣವಲ್ಲವೆ ? ಇಂತಹ ಆಸೆಗೆ ಬಲಿಬಿದ್ದು ನಿನ್ನ ಮೌಲ್ಯ ಕಳೆದುಕೊಳ್ಳಬೇಡ. ಬಡ ವರನ್ನು ಹಳಿಯಬೇಡ. ನಿನಗೂ ಅಂತಹ ಬಡತನ ಬಂದರೆ ? ನಿನಗೆ ಆಗ ಯಾರಾದರೂ ಸಹಕರಿಸಬಹುದು. 'ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ' ಅಲ್ಲವೆ? 'ನೀ ನನಗಿ-ದ್ದರೆ ನಾ ನಿನಗೆ' ಲೋಕದಲ್ಲಿ ಇರುವತನಕ ಎಲ್ಲರೊಳಗೆ ಒಂದಾಗಿ ಇರಬೇಕು.

ಲೋಕದಾಗಿರುವ ತನಕ ಬೇಕಾಗಿ ಇರಬೇಕ
ಸಾಕಾಗಿ ಶಿವನ ಸದರೀಗಿ । ಹೋಗುವಾಗ
ಎಲ್ಲಾರು ಬರತಾರ ಕಳಸಾಕ.

ದೇವನ ಈ ಲೋಕದಲ್ಲಿ ಇರುವತನಕ ಒಂದಾಗಿ ಇರ ಬೇಕು. 'ದೇವನ ಮನೆ ಈ ಜಗವೆಲ್ಲ; ನಮ್ಮ ಬಾಡಿಗೆ ತೀರಿದಾಗ ಶಿವ ಬಿಡು ಅಂದಾಗ ಬಿಡಬೇಕು. ಪರಮಾತ್ಮನ ಹತ್ತಿರ ನಾವು ಹೋಗುವಾಗ ಕಳಿಸಲು ಎಲ್ಲರೂ ಬರಬೇಕೆಂದು ಬಯಸಿದರೆ

ಅಂತಹ ಒಳ್ಳೆಯ ಬದುಕು ಬದುಕಬೇಕು. ಸರಳ ಸುಂದರ ಮಾತುಗಳಲ್ಲಿ ವ್ಯಕ್ತವಾದ ಈ ಮೌಲ್ಯ ಸಾಮಾನ್ಯವೆ? ಡಿ. ವ್ಹಿ. ಜಿ ಯವರ ಒಂದು ಪದ್ಯವನ್ನು ಇಲ್ಲಿ ಸ್ಮರಿಸಬಹುದು.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ।
ಎಲ್ಲರೊಳಗೊಂದಾಗು– ಮಂಕುತಿಮ್ಮ.*

ಇದನ್ನು ಸಾಧಿಸುವುದೇ ಜೀವನದ ಗುರಿ. ಎಲ್ಲರ ಹೃದಯದಲ್ಲಿ ನೆಲೆಸಿರುವ ಪರಮಾತ್ಮನನ್ನು ಸೌಹಾರ್ದತೆಯಿಂದ ಕಾಣಬಹುದು. ಅಂತಹ ಉನ್ನತ ಮೌಲ್ಯಗಳನ್ನು ತ್ರಿಪದಿಗಳಲ್ಲಿ ಎಷ್ಟು ಸಹಜವಾಗಿ ಹೇಳಿದ್ದಾರೆ ನಮ್ಮ ಜನಪದ ಕವಿಗಳು.

ತ್ಯಾಗ :

ಇನ್ನೊಬ್ಬರ ಹಿತಕ್ಕಾಗಿ ತನ್ನ ಸುಖವನ್ನು ಬಿಟ್ಟು ಕೊಡುವದು; ತ್ಯಜಿಸುವದು; ತ್ಯಾಗ-ಜನಪದ ಸಾಹಿತ್ಯದಲ್ಲಿ ಇಂತಹ ತ್ಯಾಗವನ್ನು ನಾವು ಕಾಣುತ್ತೇವೆ. ಗಂಡು-ಹೆಣ್ಣಿಗಾಗಿ, ಹೆಣ್ಣು ಗಂಡಿಗಾಗಿ ತ್ಯಾಗ ಮಾಡುವದು ಒಂದು ವಿಧವಾದರೆ ಸಮಾಜಕ್ಕಾಗಿಯೇ ತ್ಯಾಗ ಮಾಡಿದ್ದಾರೆ ಕೆಲವು ನಾರಿಮಣಿಗಳು. ಕೆರೆ ಹೊನ್ನಮ್ಮ, ಒಡ್ಡರಬೋಯಿ, ಹುಳಿಯಾರು ಕೆಂಚಮ್ಮ ಮುಂತಾದ ಕತೆಗಳು ತ್ಯಾಗ ಬಲಿದಾನದ ಸಂಕೇತ

---

* ಮಂಕುತಿಮ್ಮನ ಕಗ್ಗ. ಪುಟ ೧೪೮,
ಡಿ. ವ್ಹಿ. ಜಿ. ಪದ್ಯ ೭೮೯.

ಗಳಾಗಿವೆ. ಜೀವನದ ಆಸರಿಕೆ-ಬೇಸರಿಕೆಯನ್ನೆಲ್ಲ ಸರಿಸಿಟ್ಟು ನಿರಾಯಾಸವಾಗಿ ಕಾರ್ಯಗೈದವರೂ ಉಂಟು. ತನ್ನ ಸುಖ ವನ್ನು ತ್ಯಾಗ ಮಾಡುವಂಥವರೂ ಇದ್ದವರುಂಟು. ತನ್ನ ಗಂಡನ ಸುಖದಲ್ಲಿ ಇನ್ನೊಬ್ಬರು ಪಾಲುಗೊಂಡಿದ್ದರೂ ಆದನ್ನು ಸಹಿಸಿ ತನ್ನ ಪ್ರೇಮ ಕಾಶ್ಮೀರಕ್ಕೆ ಚ್ಯುತಿ ಬರುತ್ತಿದ್ದರೆ ಅದನ್ನು ಸಹಿಸುವಳು. ತನ್ನ ಮೇಲೆ ಇನ್ನೊಬ್ಬಳನ್ನು ತಂದರೆ ಅದಕ್ಕೂ ಸುಮ್ಮನಾಗುವಳು. ಅಷ್ಟೇ ಏಕೆ ಪ್ರಸಂಗ ಬಂದಾಗ ಪ್ರಾಣ ತ್ಯಾಗ ಮಾಡಿದ ಘಟನೆಗಳೂ ಇವೆ. ನಮ್ಮ ನಾಡಿನ ಚರಿತ್ರೆಯು ಅನೇಕ ವೀರಗಲ್ಲುಗಳನ್ನು ಒಳಗೊಂಡಂತೆ ಮಹಾ ಸತಿಯರ ಕಲ್ಲುಗಳನ್ನು ಒಳಗೊಂಡಿದೆ. ಸಮಾಜಕ್ಕಾಗಿ, ನಾಡಿ ಗಾಗಿ ತಮ್ಮ ಜೀವವನ್ನು ಬಲಿಕೊಟ್ಟ ಎಷ್ಟೊ ಹೆಣ್ಣುಮಕ್ಕಳು ಇದ್ದಾರೆ ಇಲ್ಲಿ. ಆ ಕಲ್ಲುಗಳು ಆ ಕುರುಹುಗಳು ಈಗಲೂ ತ್ಯಾಗದ ಸಂಕೇತಗಳಾಗಿ ಮೆರೆಯುತ್ತಲಿವೆ. ಇದಕ್ಕೆ ಒಳ್ಳೆಯ ನಿದರ್ಶನ 'ಕೆರೆಗೆ ಹಾರ' ಎಂಬ ಸುಪ್ರಸಿದ್ಧ ಕವನ.

ಕಲ್ಲನಕೇರಿ ಮಲ್ಲನಗೌಡ ಒಂದು ಕೆರೆ ಕಟ್ಟಿಸಿದ್ದಾನೆ. ಆ ಕೆರೆಗೆ ನೀರೇ ಇಲ್ಲ. ಸಂಪ್ರದಾಯದಂತೆ ಹೊತ್ತಿಗೆ ತೆಗೆಸು ವರು. ಹಿರಿಸೊಸೆ ಮಲ್ಲವ್ವನನ್ನು ಕೆರೆಗೆ ಹಾರ ಕೊಟ್ಟರೆ ನೀರು ಲಭ್ಯವಾಗುತ್ತದೆಂದು ಜೋಯಿಸರು ಹೇಳುವರು. ಗೌಡನಿಗೆ ಈಗ ಚಿಂತೆ. ಹಿರಿ ಸೊಸಿನ ಕೊಟ್ಟರೆ ಹಿರಿತನಕ ಯಾರಿಲ್ಲ. ಕಿರಿಸೊಸೆ ಭಾಗೀರಥಿನ ಕೊಡಲು ಮನಸ್ಸಾಗುವದಿಲ್ಲ. ಆದರೂ ಅನಿವಾರ್ಯವಾಗಿ ಅವಳನ್ನೇ 'ಹಾರ' ಕೊಡಲು ತೀರ್ಮಾನಿಸು ವರು. ಭಾಗೀರಥಿಗೆ ಇದು ತಿಳಿದು ತವರವರ ನೋಡಿ ಬರ

ಬೇಕೆಂದು ಅತ್ತೆಯ ಅಪ್ಪಣೆ ಪಡೆದು ತವರಿಗೆ ಬಂದು ಒಳ ಮಾತು ಹೇಳಲಾಗದೆ ಬೇರೆ, ಬೇರೆ ಮಾತುಗಳನ್ನು ಹೇಳುವಳು. ಕೊನೆಗೆ ಆತ್ಮೀಯ ಗೆಳತಿಯೊಂದಿಗೆ ಆ ಒಳಮಾತನ್ನು ಹೇಳಿದಾಗ ಅವಳು 'ಇಟ್ಟ್ಯಾಂಗ' ಇರಬೇಕು ಎಂದು ಹೇಳುತ್ತಾಳೆ. ತಿರುಗಿ ಗಂಡನ ಮನೆಗೆ ಬಂದು ನಿತ್ಯದ ಕಾರ್ಯಮಾಡುವಂತೆ ತೊಡಗಿದರೂ ತನ್ನ ಸಾವು ನೆನಪಾಗಿ ಕಣ್ಣೀರು ಉದುರುವವು. ಆದರೆ ಅವುಗಳನ್ನು ತೋರಗೊಡದೆ, ನುಂಗಿದ್ದಾಳೆ. ಕೆರೆಗೆ ಪೂಜೆಗೆ ಎಲ್ಲರೊಡನೆ ಬಂದು ಉಳಿದವರು ಕೆರೆಯಲ್ಲಿ ಬಿಟ್ಟ ಬಂಗಾರ ಬಟ್ಟಲನ್ನು ತರಲು ತಾನೇ ಹೋಗಿ ಗಂಗೆಯೊಂದಿಗೆ ಕೂಡಿ ಬಿಡುವಳು. ಅವಳ ಗಂಡನಿಗೆ ಈ ಸುದ್ದಿ ನಂತರ ತಿಳಿಯುವದು. ಕೆರೆಗೆ ಬಂದು ತನ್ನ ಹೆಂಡತಿಯನ್ನು ಕಾಣದಾದಾಗ ತಾನೂ ಸತಿಯೊಡನೆ ಸಹಗಮನ ಮಾಡುವನು. ಕೆರೆಗಾಗಿ ಹೆಂಡತಿ, ಹೆಂಡತಿಗಾಗಿ ಗಂಡ ಮಾಡಿದಂತಹ ತ್ಯಾಗ ನಿಜವಾಗಿಯೂ ಅಸಾಮಾನ್ಯ ತನ್ನ ಸಾವು ಗೊತ್ತಾದ ಹೆಣ್ಣು ಮತ್ತೊಂದು ದಾರಿಯಿಲ್ಲದೆ ಕೆರೆಗೆ ಹಾರವಾಗುವ ಪ್ರಸಂಗ ಬಂದುಬಿಡುತ್ತದೆ. ಅಲ್ಲಿ ಅವಳಿಗೆ ವಿಚಾರ ಮಾಡಿ ಪ್ರತಿಕ್ರಿಯೆ ತೋರಿಸುವ ಮಾತೇ ಇಲ್ಲ. ಸಾರ್ವಜನಿಕ ಸುಖಕ್ಕಾಗಿ ವೈಯಕ್ತಿಕ ಸುಖ ನಶಿಸುತ್ತದೆ. ಹೀಗೆ ಸತ್ತು ಬದುಕುತ್ತಾಳೆ. ಜೀವತ್ಯಾಗ ಮಾಡಿ ಕೆರೆಗೆ ನೀರು ಕರುಣಿಸಿ, ಸಾಯುವ, ಒಣಗಿದ ಗಂಟಲಕ್ಕೆ ಚೇತನದ ಚಿಲುಮೆಯಾದ ಈ ಸ್ತ್ರೀಯ ತ್ಯಾಗದ ಮುಂದೆ ಗುರುತರವಾದುದು ಯಾವುದಿದೆ?

ಈ ಮೇಲಿನ ಉದಾಹರಣೆಯು ತ್ಯಾಗದ ಒಂದು ಮುಖವಾದರೆ ಇಂತಹ, ಇನ್ನೂ ಎಷ್ಟೊ ಭಿನ್ನ ಭಿನ್ನ ಮುಖಗಳನ್ನೂ ಜನಪದ ತ್ರಿಪದಿಗಳಲ್ಲಿ ನಾವು ಕಾಣಬಹುದು. ರೈತ ತಾನು ಬದುಕುವುದರ ಜೊತೆಗೆ ಇನ್ನೊಬ್ಬರನ್ನೂ ಬದುಕಿಸುತ್ತಾನೆ. ಇದ್ದುದರಲ್ಲಿ ಹರಿದು ಹಂಚುವ ಪ್ರವೃತ್ತಿ ಅವನಲ್ಲಿದೆ. ಇನ್ನೊಬ್ಬರ ಹಿತಕ್ಕೆ, ಒಳ್ಳೆಯದಕ್ಕೆ ತಾನು ಬಿತ್ತಿ ಬೆಳೆದುದರೊಳಗಿಂದ ಕೊಡಲು ಅವನು ಸದಾ ಸಿದ್ಧ.

ಕಡೆಯ ಬಲಕಿನ ತಾಳ ಎಡೆಯಾಯ್ತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಕಿ । ಜೀವನಕೆ
ನಡುವಿನಾ ತಾಳ ರೈತಸಿಗೆ ॥

ತಾನು ಬಿತ್ತುವಾಗಲೇ ಒಂದು ತಾಳ ಅರಸನಿಗೆ ಇನ್ನೊಂದು ಪಶುಪಕ್ಷಿಗೆ ನಡುವಿನ ತಾಳ ತನಗೆ ಎಂದು ನಿರ್ಧರಿಸಿಕೊಂಡೇ ಬಿತ್ತುವನು. ಅಂತಹ ತ್ಯಾಗ ಅವನಲ್ಲಿದೆ. ಅದರಂತೆಯೇ ಇಲ್ಲಿಯ ಹೆಣ್ಣೂ ಕೂಡ ತ್ಯಾಗದ ಪುತ್ಥಳಿ. ತಂದೆ-ತಾಯಿಗಳಿಗೆ ಎದುರು ಮಾತನಾಡದೆ, ಹಿರಿಯರು ಹೇಳಿದ್ದಕ್ಕೆ ಅನುಮತಿಯನ್ನೀಯುತ್ತಾಳೆ ಇವಳು. ತನಗಾದ ನೋವನ್ನು ನುಂಗಿ, ತನ್ನ ಸುಖವನ್ನೇ ಇನ್ನೊಬ್ಬರ ನೆಮ್ಮದಿಗೆ ತ್ಯಾಗ ಮಾಡುವ ಹಿರಿಯ ಗುಣ ಇವಳಲ್ಲಿದೆ. ಇಲ್ಲಿ ನೋಡಿ—

ಇಷ್ಟು ಸಡಗರನೊಯ್ದು । ಕುಡುಗೋಲಿಗ್ಹಾಕಲಿ ।
ಅಷ್ಟು ಸಂಪತ್ತೊಯ್ದು । ಸುಡುಗಾಡಕಿಕ್ಕಲಿ ।
ನಡಂತ್ರವಾದೀತು । ಬಾಲಿಯು ಈ ಜನವು ।
ಎಡೆಬಿಚ್ಚಿ ಯಾರಿಗ್ಹೇಳಲಿ ದೇವಾ ॥ ಕೊಟ್ಟಾರ
ಮುದುಕಗ ॥

ಎಂಬ ಪದ್ಯದಲ್ಲಿ ತೋರಿ ಬರುವ ಹೆಣ್ತನದ ಅಳಲು ನಿಜವಾಗಿ ಹೃದಯ ಮಿಡಿಯುವಂತಹದು. ಆ ಮುದುಕನ ಸಂಪತ್ತಿಗೆ ಮರುಳಾಗಿ, ತಂದೆ-ತಾಯಿಗಳು ಮಗಳನ್ನು ಕೇಳದೆಯೇ ಮುದುಕನಿಗೆ ಲಗ್ನ ಮಾಡಿಬಿಟ್ಟಿದ್ದಾರೆ. ಅಂಥವನೊಂದಿಗೆ ಸಂಸಾರ ಸಾಗಿಸುವದಾದರೂ ಹೇಗೆ? ತಾರುಣ್ಯದ ತುತ್ತತುದಿಯಲ್ಲಿದ್ದ ಮುಗ್ಧ ಹೆಣ್ಣಿಗೆ ಮುದುಕನಿಂದಾವ ಸುಖ ಸಾಧ್ಯ?

ಅಂತಹದೆಲ್ಲವನ್ನು ಸಹಿಸಿಕೊಂಡು, ನುಂಗಿಕೊಂಡು ಸುಖವನ್ನೇ ತ್ಯಾಗ ಮಾಡಿದ್ದಾಳೆ. ಅದಕ್ಕೆ ಈ ಮುದುಕನಿಗೆ ಅವಳು ಹೀಗೆ ಹೇಳಿದ್ದಾಳೆ. "ಮುಟ್ಟಬ್ಯಾಡಜ್ಜಯ್ಯ: ಹಿಡಿಬ್ಯಾಡ ಮುತ್ತಯ್ಯ, ಮುದಿಯಜ್ಜ ನಿನಮನಿಯ ಮುಂಚಿನ ಮಡದಿಯ ಚೊಚ್ಚಿಲ ಮಗಳಾಗಿ ಇರುವೆನು" ಎಂದು ಹೇಳುವದನ್ನು ಕಂಡಾಗ ನಿಜವಾಗಿ ಅವಳ ತ್ಯಾಗ ಎಂತಹದು ಎಂಬುದರ ಅರಿವು ಆಗದೇ ಇರದು.

ಗಂಡ ಇನ್ನೊಬ್ಬಳೊಂದಿಗೆ ಅವ್ಯವಹಾರ ಸಂಬಂಧ ಇಟ್ಟುಕೊಂಡರೂ ಹೆಂಡತಿ ಅದನ್ನು ಸಹಿಸಿಕೊಂಡಿದ್ದಾಳೆ ತನ್ನ ಸುಖದ ಸೊತ್ತಿನ ಅರ್ಧಪಾಲನ್ನು ಇನ್ನೊಬ್ಬಳಿಗೆ ಕೊಟ್ಟಿದ್ದಾಳೆ.

> ಗಂಡ ಪಂಡಿತರಾಯ ರಂಡೀಯ ಮಾಡಿದರ
> ಭಂಡ ಮಾಡವರ ಮಗಳಲ್ಲ | ಕೊರಳಾನ
> ಗುಂಡು ಬೇಡಿದರ ಕೊಡುವೇನ ||

ತನ್ನ ಯಜಮಾನ ಇನ್ನೊಬ್ಬಳನ್ನು ತಂದು ಇಟ್ಟರೂ

ಇವಳು ಸಹಿಸುವಳು. ಅಲ್ಲದೆ ಅವಳು ಕೊರಳೊಳಗಿನ ಗುಂಡು ಬೇಡಿದರೂ ಸಹ ಕೊಡುವೆನು ಎಂದು ಹೇಳುತ್ತಾಳೆ. ಅವಳು ಬೇಡಿದ ಸಂಪತ್ತನ್ನು, ತನಗಿದ್ದ ಸುಖದ ಅರ್ಧಭಾಗವನ್ನು ತ್ಯಾಗ ಮಾಡಿದ ಈ ಹೆಣ್ಣು ಸಾಮಾನ್ಯವೆ? ಇಲ್ಲಿಯ ಹೆಣ್ಣು ಗಂಡನ ಮೇಲೆ ತೋರುವ ಪ್ರೀತಿ ಅಸಾಧಾರಣವಾದುದು. ಗಂಡನಿಗಾಗಿ ತವರ ಮರೆಯಲು ಪ್ರಯತ್ನಿಸುವಳು. ಒಂಬತ್ತು ತಿಂಗಳು ಹೊತ್ತು ಮಗುವಿಗೆ ಜನ್ಮ ಕೊಟ್ಟು ಬಂಜೆಂಬ ಶಬ್ದ ದಿಂದ ಪಾರಾಗುವುದರ ಜೊತೆಗೆ ಅನಂತ ಕಷ್ಟಗಳನ್ನು ನುಂಗಿ, ಮಗುವಿಗಾಗಿ, ಗಂಡನ ಮನೆಗಾಗಿ ತನ್ನ ಸುಖವನ್ನು ತ್ಯಾಗ ಮಾಡಿ ವಂಶದ ಕುಡಿ ಕುದುರಲೆಂದು ಬಯಸುವಳು. ಹೀಗೆ ಜನಪದ ತ್ರಿಪದಿಗಳ ತುಂಬೆಲ್ಲ 'ತ್ಯಾಗ' ಎದ್ದು ತೋರುತ್ತದೆ. ಅಲ್ಲದೆ ಪ್ರತಿಯೊಂದು ಸನ್ನಿವೇಶದಲ್ಲಿ ಒಂದಿಲ್ಲೊಂದು ಬಗೆ ಯಿಂದ ಅದು ಹೊರಹೊಮ್ಮುತ್ತದೆ. ನಮ್ಮ ಸಮಾಜದ ಸಂಪ್ರ ದಾಯಗಳು ಒಂದೊಂದು ಸಲ 'ತ್ಯಾಗ'ದ ಸೋಗಿನಲ್ಲಿ ನಮ್ಮ ಜನರ ಬದುಕನ್ನೇ ಕಸಿದುಕೊಂಡಿವೆ ಎಂದು ಹೇಳಬಹುದು.

ಕೊನೆಯ ಮಾತು :

ಇಲ್ಲಿಯವರೆಗೆ ಜನಪದಸಾಹಿತ್ಯದಲ್ಲಿಯ ಜೀವನ ಮೌಲ್ಯ ಗಳ ಬಗ್ಗೆ ನೋಡಿದ್ದಾಯಿತು. ಇದೊಂದು ಸಮಗ್ರ ಚಿತ್ರಣ ವಲ್ಲ. ಜನಪದ ಸಾಹಿತ್ಯದ ಕ್ಷೇತ್ರ ವಿಸ್ತಾರವಾದುದು. ದುಡಿ ಯುವ ಕೈಗಳಿಗೆ ಇಲ್ಲಿ ಸಾಕಷ್ಟು ಕೆಲಸವಿದೆ. ಈ ಸಂಪತ್ತು ಬಹಳ ದೊಡ್ಡದಿದೆ. 'ಜನಪದ ಸಾಹಿತ್ಯ' ವನ್ನು ಸಂಗ್ರಹಿಸು

ವಲ್ಲಿ ಈ ಸಾಹಿತ್ಯ ಕುರಿತು ಕಾರ್ಯಮಾಡುವವರ ಸ್ಥಿತಿ 'ಆದಾವ ನಮುಜ್ವಾಳ ಉಳದಾವ ನಾಮಹಾಡ.'

ನಾನು ವಿಶೇಷವಾಗಿ ಜನಪದ ತ್ರಿಪದಿಗಳನ್ನು ಲಕ್ಷ ದಲ್ಲಿಟ್ಟುಕೊಂಡು ಈ ಪುಸ್ತಿಕೆಯನ್ನು ರಚಿಸಿದ್ದೇನೆ. ಭಕ್ತಿ, ಪ್ರೀತಿ, ಸಹನೆ, ನೀತಿ, ತ್ಯಾಗ ಈ ಮೊದಲಾದ ಮೌಲ್ಯಗಳು ಲಾವಣಿಗಳಲ್ಲಿ, ಕಥೆ ಕವನಗಳಲ್ಲಿ, ಜನಪದ ಕತೆಗಳಲ್ಲಿ ಒಟ್ಟು ಜನಪದಕ್ಕೆ ಸಂಬಂಧಪಟ್ಟ ಒಟ್ಟು ವಿವಿಧ ಸಾಹಿತ್ಯ ಪ್ರಕಾರ ಗಳಲ್ಲಿ ಕಂಡು ಬರುವ ಶಾಶ್ವತ ಮೌಲ್ಯಗಳು ಕಾಡನ್ನು ಹೊಕ್ಕ ಆಡು ಮೇಯುವುದಾದರೂ ಎಷ್ಟು ? ಒಟ್ಟಿನಲ್ಲಿ ಇದೊಂದು ಕರಿಯ ಕನ್ನಡಿಯಲ್ಲಿ ಹಿಡಿಯಲು ಮಾಡಿದ ಪ್ರಯತ್ನವಷ್ಟೆ.

ನಾಗರೀಕತೆ ಬೆಳೆದಂತೆ ಸಂಪ್ರದಾಯಗಳು ನಶಿಸುತ್ತ ನಡೆದಿದೆ. ಹೊಸ ಕಿರಣಗಳು ಮೂಡುತ್ತಲಿವೆ. ಹೀಗಾಗಿರು ವುದರಿಂದ ಹಳೆಯದು ಕುಂಟುತ್ತದೆ. ಇಂದಿನ ಚಲನಚಿತ್ರ ಪ್ರಪಂಚ ದೊಡ್ಡದಾದಂತೆ ಜನಪದಕಂಠಗಳನ್ನು ನಾವು ಕಳೆದು ಕೊಳ್ಳುತ್ತಲಿದ್ದೇವೆ. ಸಿಕ್ಕಷ್ಟು ವೈಜ್ಞಾನಿಕ ಉಪಕರ ಣಗಳಿಂದ ಹಿಡಿದಿಡಬೇಕು. ಕೆಲವು ಜನರು ಜನಪದ ಪದ್ಯ ಗಳನ್ನು ಅವುಗಳ ಧಾಟಿಯಲ್ಲಿ ಹೇಳದೇ ಜನರ ಮೆಚ್ಚುಗೆ ಗಾಗಿ ಚಲನಚಿತ್ರ ಗೀತೆಗಳ ಧಾಟಿ ಹಚ್ಚುವರು. (ತಿರುಗಿ ಸುವರು) ಇಂದಿನ ರಂಗದಮೇಲಿರುವ ಪಾರಿಜಾತಗಳು ಒಮ್ಮೊಮ್ಮೆ ಪುರಾಣಗಳಾಗಿ, ಶಾಸ್ತ್ರಗಳಾಗಿ, ನೀತಿಯ ಕಂತೆ ಗಳಾಗಿ ಪ್ರದರ್ಶಿಸಲ್ಪಡುವುದು ವಿಷಾದನೀಯ.

ಜನಪದ ಸಾಹಿತ್ಯದಲ್ಲಿ ಆಸಕ್ತಿವುಳ್ಳವರು ಇತ್ತಕಡೆ ತಮ್ಮಗಮನ ಹರಿಸಿ ಆಸ್ಥೆಯಿಂದ ಕಾರ್ಯಮಾಡಿದರೆ ಒಳ್ಳೊಳ್ಳೆ ಕೃತಿಗಳು, ಸಾಹಿತ್ಯದ ಸೊಬಗು ಬೆಳಕಿಗೆ ಬರಬಹುದು. ಅನಾಮಿಕ ಜನಪದ ಕವಿಗಳನ್ನು ಪತ್ತೆಹಚ್ಚಿ ಅವರ ಹೃದಯದ ಹಾಡುಗಳನ್ನು ಹೊರತರಬೇಕು. ನಮ್ಮ ಸಂಸ್ಕೃತಿಯ ಪ್ರತೀಕ ಸಾಹಿತ್ಯವೆಂದಾಗ ಅದನ್ನು ರಕ್ಷಿಸುವುದು ಅವಶ್ಯವಲ್ಲವೆ ? ಅಂತಹ ಪ್ರಯತ್ನ ಮಾಡಿದಲ್ಲಿ ನಾಡಿಗೆ ನುಡಿಗೆ ಕ್ಷೇಮವಾದೀತು.

ಗ್ರಂಥ ಋಣ

೧) ಚಾಪ ಹಾಕತೀವ ಡಪ್ಪಿನ ಮ್ಯಾಲ – ಡಾ. ಸಂಗಮೇಶ ಬಿರಾದಾ
೨) ಕನ್ನಡ ಜಾನಪದ ಗೀತೆಗಳು – ಡಾ. ಗದ್ದಗೀಮಠ
೩) ಮಲ್ಲಿಗೆದಂಡೆ – ಕಾಪಸೆ ರೇವಪ್ಪನವರು
೪) ಗರತಿಯ ಹಾಡು – ಹಲಸಂಗಿಯ ಚನ ಮಲ್ಲಪ, ರೇವಪ್ಪ ಹಾಗು ಗೆಳೆಯರ
೫) ಬೆರಸಿ ಇಟ್ಟೀನ ನೆನ ಗಡಲಿ – ಜ್ಯೋತಿ ಹೊಸೂರ
೬) ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ. ತಿಪ್ಪೇರುದ್ರಸ್ವಾ
೭) ಜಾನಪದ ಮೈಲಿ ಕಲ್ಲು ಗಳು – ತಿ. ನಂ. ಶಂಕರ ನಾರಾಯ
೮) ಜಾನಪದ ಕಾವ್ಯ – ಗಿರಡ್ಡಿ ಗೋವಿಂದರಾ
೯) ಜಾನಪದ ಕಾವ್ಯದಲ್ಲಿ ಜೀವನಧರ್ಮ – ಪಿ. ವ್ಹಿ. ಮಲ್ಲಾಪೂರ
೧೦) ಮಂಕುತಿಮ್ಮನ ಕಗ್ಗ – ಡಿ. ವ್ಹಿ. ಜಿ.
೧೧) ಜನಪದಸಾಹಿತ್ಯದಲ್ಲಿ ನೀತಿ – ಪ್ರೊ. ಎಂ. ಎಸ್. ವ

ಉಪನ್ಯಾಸ ಗ್ರಂಥ ಮಾಲೆಯ ಕೆಲವು ಉಪಯುಕ್ತ ಪುಸ್ತಕಗಳು

೧. ಜಾನಪದ ಕಥೆಗಳು —ಎಲ್.ಆರ್. ಹೆಗಡೆ
೨. ಜನಪದ ಕಾವ್ಯದಲ್ಲಿ ಜೀವನ ಧರ್ಮ
—ಪಿ.ವ್ಹಿ. ಮಲ್ಲಾಪೂರ
೩. ಜಾನಪದ ವೀರ ಗೀತೆಗಳು —ಬಿ.ಬಿ. ಮಹೀಶವಾಡಿ
೪. ಜನಪದ ಕಾವ್ಯ —ಗಿರಡ್ಡಿ ಗೋವಿಂದರಾಜ
೫. ಜನಪದದಲ್ಲಿ ಮಕ್ಕಳ ಸಾಹಿತ್ಯ
—ಸಂಗಮೇಶ ಎಂ. ಬಿರಾದಾರ
೬. ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪರಿದರ್ಥದ ಚಲಕ
—ಸಿಂಪಿ ಲಿಂಗಣ್ಣ
೭. ಜನಪದ ಸಾಹಿತ್ಯದಲ್ಲಿ ನೀತಿ —ಎಂ.ಎನ್. ವಾಲಿ
೮. ಜನಪದ ಸಾಹಿತ್ಯದಲ್ಲಿ ಹಾಸ್ಯ
—ಮೃತ್ಯುಂಜಯ ಹೊರಕೇರಿ
೯. ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ
—ಬಸವರಾಜ ಮಲಶೆಟ್ಟಿ
೧೦. ಹಾಲಕ್ಕಿ ಒಕ್ಕಲಿಗರ ಜನಪದ ಗೀತ
—ಎನ್.ಆರ್. ನಾಯಕ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೧